ದಯವಿಟ್ಟು ಮಾನ್ಯ ಅಧ್ಯಕ್ಷರು ಎಲ್ಲರಿಗೂ ಕೂಡ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಮೂರೂ ಪಕ್ಷಗಳವರು ತಮ್ಮ ತಮ್ಮ ಪಕ್ಷದ ವತಿಯಿಂದ ಚರ್ಚೆಯಲ್ಲಿ ಯಾರ್ಯಾರು ಪಾಲ್ಗೊಳ್ಳುತ್ತಿದ್ದಾರೆ ಎಂಬ ಬಗ್ಗೆ ಹೆಸರುಗಳನ್ನು ನನಗೆ ಕೊಟ್ಟರೆ, ಅವರ ಹೆಸರುಗಳನ್ನು ಕರೆಯಲಿಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ಮಾತನಾಡಬಯಸುವವರ ಹೆಸರುಗಳನ್ನು ನನಗೆ ಕೊಡಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

6. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ :

ವಿಷಯ : ರಾಜ್ಯದಲ್ಲಿ ಕಳೆದ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ಅಕಾಲಿಕ ಮಳೆ ಮತ್ತು ಪ್ರವಾಹ ಅನಾಹುತದಿಂದ ಉಂಟಾದ ತೊಂದರೆಯ ವಿಚಾರದಲ್ಲಿ ನೀಡಿರುವ ಸೂಚನೆಯ ಬಗ್ಗೆ :

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ತೀರ್ಪನ್ನು ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ತಾವು convert ಮಾಡಿ ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟಿದ್ದೀರಿ. ನಿಮ್ಮಲ್ಲಿ ನನ್ನದೊಂದು ಮನವಿ. ಇಂತಹ ಗಂಭೀರವಾದಂತಹ, ಪ್ರಾಮುಖ್ಯವಿರುವಂತಹ, ಸಾರ್ವಜನಿಕ ಮಹತ್ವವಿರುವಂತಹ ತುರ್ತಾದಂತಹ ವಿಚಾರವನ್ನು ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡಿದ್ದರೆ ಹೆಚ್ಚು ಮಹತ್ವ ಬರುತ್ತಿತ್ತು. ಈ ಸದನಕ್ಕೆ ಹೆಚ್ಚಿನ ಗಾಂಭೀರ್ಯ ಬರುತ್ತಿತ್ತು ಮತ್ತು ರಾಜ್ಯದ ಜನತೆಗೂ ಕೂಡ ಒಳ್ಳೆಯ message ಹೋಗುತ್ತಿತ್ತು. ಆ ಕಾರಣದಿಂದಾಗಿ ನಿಯಮ 60ರ ಅಡಿಯಲ್ಲೇ ಚರ್ಚೆಗೆ ತೆಗೆದುಕೊಂಡಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಆದರೆ ನೀವು ಅದನ್ನು ನಿಯಮ 69ಕ್ಕೆ convert ಮಾಡಿದ್ದೀರಿ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಸ್ತಾಪ ಮಾಡಿದಂತೆ ಕರ್ನಾಟಕದ ಇತಿಹಾಸದಲ್ಲಿ ಹಿಂದೆಂದೂ ಕೂಡ ಇಷ್ಟೊಂದು ಭಾರಿ ಪ್ರಮಾಣದ ಮಳೆ ಯಾವಾಗಲೂ ಬಿದ್ದಿರಲಿಲ್ಲ. ನಾವ್ಯಾರೂ 100 ವರ್ಷದವರಾಗಿಲ್ಲ. ಕಳೆದ 100

ವರ್ಷಗಳಲ್ಲಿ ಕರ್ನಾಟಕದಲ್ಲಿ ಇಷ್ಟು ಮಳೆ ಬಿದ್ದಿರಲಿಲ್ಲವೆಂದು ದಾಖಲಾತಿಗಳು ಹೇಳುತ್ತವೆ. ಸರ್ಕಾರ ಕೂಡ ಅದೇ ವರದಿಯನ್ನು ಕೊಟ್ಟಿದೆ. ಬಿಜಾಪುರ ಜಿಲ್ಲೆಯ ದೇವರಹಿಪ್ಪರಗಿಯಲ್ಲಿ 24 ಗಂಟೆಯೊಳಗೆ, ಒಂದು ದಿನದಲ್ಲಿ, on First of October 2009, 143 m.m. ಮಳೆ ಬಿದ್ದಿದೆ. This is the highest rainfall in a day during the past 100 years. The Previous highest rain all recorded was 135.8 m.m. on 17th January 1915. 1915 ರಲ್ಲಿ ಒಂದು ದಿನದಲ್ಲಿ highest ಮಳೆ ಬಿದ್ದಿತ್ತು. ಅದಾದ ಮೇಲೆ ಅಕ್ಟೋಬರ್ 1ನೇ ತಾರೀಖು, ಈ ವರ್ಷ, 143 m.m. ಮಳೆಯಾಗಿದೆ. ಅದೇ ರೀತಿ ದೇವದುರ್ಗ ತಾಲ್ಲೂಕಿನ ಗಬ್ಬೂರಿನಲ್ಲಿ 2nd october ನಂದು 377 m.m ಮಳೆಯಾಗಿದೆ. ಮಾನ್ಯ ಅಧ್ಯಕ್ಷರೆ, ಮಲೆನಾಡಿನಿಂದ ಬಂದಿರುವವರಾದ ನಿಮಗೆ ಇದೆಲ್ಲಾ ಗೊತ್ತಾಗುತ್ತದೆ. This is the higest rainfall received in 24 hours in the past 100 years. 1964ನೇ ಇಸವಿಯಲ್ಲಿ 234 m.mನಷ್ಟು ಮಳೆ ಬಿದ್ದಿತ್ತು. ಆದರೆ ಈಗ 377 m.m. ಮಳೆ ಬಿದ್ದಿದೆ. ಅನೇಕ ಜಿಲ್ಲೆಗಳಲ್ಲಿ ಅಂದರೆ, ರಾಯಚೂರು, ಬಿಜಾಪುರ, ಬಾಗಲಕೋಟೆ, ಕೊಪ್ಪಳ, ಗದಗ್ ಮತ್ತು ಬಳ್ಳಾರಿ, ಹೀಗೆ ಎಲ್ಲಾ ಜಿಲ್ಲೆಗಳಲ್ಲಿ un-precedented ಮಳೆ ಬಿದ್ದಿದೆ. ನಾನು ಅದನ್ನೇ ಪ್ರಸ್ತಾಪ ಮಾಡುತ್ತಿದ್ದೆ. 1st October 2009ರಂದು 143 m.mನಷ್ಟು ಮಳೆ ಬಿಜಾಪುರದ ದೇವರಹಿಪ್ಪರಗಿ ತಾಲ್ಲೂಕಿನಲ್ಲಿ ಬಿದ್ದಿದೆ. ಅವತ್ತು ಸರ್ಕಾರ ಸುತ್ತೂರಿನಲ್ಲಿತ್ತು. ನಾನು ಇದನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಇಷ್ಟೊಂದು ಭೀಕರವಾದಂತಹ ಮಳೆಯ ಪ್ರವಾಹ ಇದ್ದರೂ ಕೂಡ, ಬೆಂಗಳೂರಿಗೂ ಬರದೇ ಇವರು ಎಲ್ಲೋ ಸುತ್ತೂರಿನಲ್ಲೇ ಇದ್ದರು ಎಂದರೆ, ಎಷ್ಟರಮಟ್ಟಿಗೆ ಈ ರಾಜ್ಯದ ಜನರ ಬಗ್ಗೆ ಇವರಿಗೆ ಕಾಳಜಿ ಇದೆ ಎಂಬ ಪ್ರಶ್ನೆ ಇವತ್ತು ಉದ್ಭವವಾಗುತ್ತದೆ. ಅವರೇ ಹೇಳಿರುವ ಪ್ರಕಾರ, ಇಡೀ ರಾಜ್ಯದಲ್ಲಿ 15 ಜಿಲ್ಲೆಗಳು ಎಂದರೆ, 60% of the total area of Karnataka, ಶೇಕಡ 60ರಷ್ಟು ಪ್ರದೇಶದಲ್ಲಿ ಈ ತರಹದ ಮಳೆ ಬಿದ್ದು ಪ್ರವಾಹವಾಗಿದೆ. ಎಲ್ಲಾ ನದಿಗಳೂ ತುಂಬಿ ಹೋಗಿವೆ. ಕೃಷ್ಣಾ, ತುಂಗಭದ್ರಾ, ಭೀಮ, ಮಲಪ್ರಭಾ, ಘಟಪ್ರಭಾ, ದೋಣಿಹಳ್ಳ, ಬೆಣ್ಣೆಹಳ್ಳ ಈ ತರಹದ ಎಲ್ಲಾ ನದಿಗಳು ತುಂಬಿ ಹೋಗಿ ಹರಿದು ವಿಪರೀತ ಪ್ರವಾಹವಾಗಿದೆ. ಕನಿಷ್ಟ ಪಕ್ಷ ಇಷ್ಟೊಂದು ಮಳೆ

ಬೀಳುತ್ತದೆ, ಇಷ್ಟೊಂದು ಪ್ರವಾಹ ಬರುತ್ತದೆಂದು ಸರ್ಕಾರಕ್ಕೂ ಗೊತ್ತಿಲ್ಲ, ಜನರಿಗೂ ತಿಳಿಸಲಿಕ್ಕಾಗಿರಲಿಲ್ಲ. ಎಷ್ಟು ನೀರು ಬಿಡುತ್ತಿದ್ದೀರಿ ಎಂಬುದೂ ಕೂಡ ಜನರಿಗೆ ಗೊತ್ತಿಲ್ಲ. ಅದು Agriculture Department ನವರಿಗೂ ಗೊತ್ತಿಲ, Irrigation Department ನವರಿಗೂ ಗೊತ್ತಿಲ್ಲ, Revenue Department ನವರಿಗೂ ಗೊತ್ತಿಲ್ಲ. ಜನರಿಗೆ 'ಇಷ್ಟೊಂದು ನೀರು ಬರುತ್ತದೆ, ನೀವು ಎಚ್ಚರಿಕೆಯಿಂದಿರಿ, ತಳಭಾಗದಲ್ಲಿ ಇರತಕ್ಕವರೆಲ್ಲಾ ಬೇರೆ ಪ್ರದೇಶಕ್ಕೆ ಬನ್ನಿ, ದೂರದ ಪ್ರದೇಶಗಳಿಗೆ ಹೋಗಿ' ಎಂದು ಎಚ್ಚರಿಕೆಗಳನ್ನು ಕೊಟ್ಟಿದ್ದರೆ, ಬಹುಶಃ 229 ಜನರು ....

ಶ್ರೀ ಟಿ.ಬಿ.ಜಯಚಂದ್ರ : ವಿಷಯವೇನೆಂದು ನನಗೆ ಅರ್ಥವಾಗುತ್ತಿಲ್ಲ. ಐದಾರು ಜನ ಶಾಸಕರಿಗೆ ಎಲ್ಲರೂ ಕೈ ಕುಲುಕುತ್ತಿದ್ದಾರೆ. ಇದೇನು ಕಥೆ ಎಂದು ನನಗೆ ಅರ್ಥವಾಗುತ್ತಿಲ್ಲ. ಅವರೇನು ಹೊಸದಾಗಿ ಸದಸ್ಯರಾಗಿ ಬಂದಿದ್ದಾರಾ? ಏನು ಕಥೆ ಇದು?

ಅಧ್ಯಕ್ಷರು : Please, ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ರೇಣುಕಾಚಾರ್ಯರವರು ನಾಳೆ ಅಸೆಂಬ್ಲಿಯಲ್ಲಿ ಒಗ್ಗಟ್ಟಿನ ಪ್ರದರ್ಶನ ಮಾಡುತ್ತೇವೆಂದು ಹೇಳಿದ್ದರು. ಈ ರೀತಿಯಾಗಿ ಒಗ್ಗಟ್ಟಿನ ಪ್ರದರ್ಶನ ಮಾಡುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ : ಚರ್ಚೆ ಬಹಳ ನೀಟಾಗಿ ಸಾಗುತ್ತಿದೆ. ನೀವು ಎಲ್ಲೋ ಹೋಗಿ ಅದರ ಹಾದಿ ತಪ್ಪಿಸಬೇಡಿ.

ಶ್ರೀ ಸಿದ್ದರಾಮಯ್ಯ : ನೀವು ಹಾಳಾಗಿರುವುದನ್ನು ಸರಿಪಡಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದೀರಿ ಎಂದು ಅವರು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, 229 ಜನ ಸತ್ತಿದ್ದಾರೆಂದು report ಕೊಟ್ಟಿದ್ದಾರೆ. ಬಹುಶಃ ಮುಂಜಾಗ್ರತೆ ತೆಗೆದುಕೊಂಡು 'ಇಷ್ಟು ಪ್ರವಾಹ ಬರುತ್ತದೆ, ನೀವೆಲ್ಲಾ ಊರು ಖಾಲಿ ಮಾಡಿ, ಮೇಲಕ್ಕೆ ಬನ್ನಿ' ಎಂದೆಲ್ಲಾ ಹೇಳಿದ್ದರೆ ಈ ರೀತಿ 229 ಜನ ಸಾಯುವುದನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತಿತ್ತು. ಸರ್ಕಾರದ ತಪ್ಪಿನಿಂದಾಗಿಯೇ ಇಷ್ಟೊಂದು ಜನರು ಸತ್ತಿದ್ದಾರೆ. ಎಲ್ಲಾ 229 ಜನರೂ ಸಹ ಸರ್ಕಾರದ ತಪ್ಪಿನಿಂದಲೇ ಸತ್ತಿದ್ದಾರೆಂದು ಎಂದು ಹೇಳುವುದಿಲ್ಲ, ಆದರೆ ಅವರಲ್ಲಿ ಕೆಲವರನ್ನಾದರೂ ಸರ್ಕಾರ ಉಳಿಸಲಿಕ್ಕೆ ಸಾಧ್ಯವಾಗುತ್ತಿತ್ತು. ಇವತ್ತು 229 ಜನ, ಪಾಪ! ಅಕಾಲ ಮರಣಕ್ಕೆ ತುತ್ತಾಗಿದ್ದಾರೆ, ಪ್ರವಾಹದಲ್ಲಿ ಸಿಕ್ಕಿಹಾಕಿಕೊಂಡು ಸತ್ತು ಹೋಗಿದ್ದಾರೆ.

(11-30 AM)

ಬೇಕಾದಷ್ಟು ಪ್ರಾಣಿಗಳು ಸತ್ತುಹೋಗಿವೆ. ಅವರ ಪ್ರಕಾರ 7800 ಚಿಲ್ಲರೆ ಪ್ರಾಣಿಗಳು ಸತ್ತಿವೆಯೆಂದು ಹೇಳಿದ್ದಾರೆ. ನನ್ನ ಪ್ರಕಾರ it will be more than that. ಏಕೆಂದರೆ, ನಾವು ಅನೇಕ ಹಳ್ಳಿಗಳಿಗೆ ಹೋಗಿದ್ದಾಗ ಕಂಡಿದ್ದೇನೆಂದರೆ ಅಲ್ಲಿ ಬಹಳ ಜನ, ಪಾಪ, ನಮ್ಮ ದನಕರುಗಳೆಲ್ಲಾ ಕೊಚ್ಚಿಕೊಂಡು ಹೋಗಿವೆ, ನಮಗೆ ಗೊತ್ತಾಗಿಲ್ಲ, ಆ ಬಗ್ಗೆ ಅಧಿಕಾರಿಗಳಿಗೆ ಹೇಳಿದರೆ, ಅದನ್ನು ಪೋಸ್ಟ್ ಮಾರ್ಟಂ ಮಾಡಬೇಕು ಇಲ್ಲವಾದರೆ ಅದಕ್ಕೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲವೆಂದು ಅವರು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ, ಅವರು ಕೊಟ್ಟಿರುವ ಲೆಕ್ಕವೇ ಬೇರೆ, ಅಲ್ಲಿ ನೀರಿನಲ್ಲಿ ಕೊಚ್ಚಿ ಹೋಗಿರುವ ಪ್ರಾಣಿಗಳ ಲೆಕ್ಕವೇ ಬೇರೆ. ನದಿ ತೀರದಲ್ಲಿ ಬರುವ, 221 ಹಳ್ಳಿಗಳು ಮುಳುಗಡೆಯಾಗಿದ್ದಾವೆಂದು ಹೇಳುತ್ತಾರೆ. ನೀವು ರಾಯಚೂರು, ಬಾಗಲಕೋಟೆ, ಬಿಜಾಪುರಗಳಂಥ ಪಟ್ಟಣಗಳಲ್ಲಿ 5,6,7,8 ಅಡಿ ನೀರು ಊರು ಒಳಗೆ ನಿಂತಿದೆ, ಎಲ್ಲೆಲ್ಲಿ ಅಂಡರ್ ಗ್ರೌಂಡ್ ಸರಿಯಾಗಿಲ್ಲ, ಹಳ್ಳಿಗಳನ್ನು ಬಿಡಿ ಆ ಎಲ್ಲಾ ಪಟ್ಟಣಗಳಲ್ಲೂ ಈ ರೀತಿ ನೀರು ನಿಂತಿದೆ. ನಾನು ಬಿಜಾಪುರಕ್ಕೆ ಹೋಗಿದ್ದೆ, ಸುಮಾರು 7–8 ಅಡಿ ನೀರು ನಿಂತಿತ್ತು. ನಾವು ಹೋದ ದಿವಸವೂ ಕೂಡ ಊರಿನ ಒಳಗಡೆ 2–3 ಅಡಿ ನೀರು ಇತ್ತು. ನಾವು ದಿನಾಂಕ 5,6,7 ಈ ಮೂರು ದಿವಸ ಹೋದೆವು. ಬಿಜಾಪುರಕ್ಕೆ 5ನೇ ತಾರೀಖಿನಂದು ಹೋಗಿದ್ದೆವು, ಅವತ್ತು ಊರಿನ ಒಳಗಡೆ 2–3 ಅಡಿ ನೀರಿತ್ತು. ಸುಮಾರು 221 ಹಳ್ಳಿಗಳು ನೀರಿನಲ್ಲಿ ಮುಳುಗಡೆಯಾಗಿ 229 ಜನ ಸತ್ತರು. ನೀವು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದರೆ ಮುಳುಗಡೆ ಯಾಗುವ ಹಳ್ಳಿಗಳ ಮತ್ತು ಸತ್ತವರ ಸಂಖ್ಯೆ ಕಡಿಮೆಯಾಗುತ್ತಿತ್ತು. ಇದರ ಪರಿಣಾಮ ಏನಾಗಿದೆ ಎಂದರೆ, ಇವರು ಕೊಟ್ಟಿರುವ ಲೆಕ್ಕದ ಪ್ರಕಾರ ಆರೂವರೆ ಲಕ್ಷ ಮನೆಗಳು ಸಂಪೂರ್ಣ ಮತ್ತು ಭಾಗಶಃ ಬಿದ್ದುಹೋಗಿವೆ. ಮತ್ತು ಬೆಳೆ ನಷ್ಟ, ಸುಮಾರು 22 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಆಗಿದೆ. ಬರದಿಂದ ಸುಮಾರು 30 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡದೆ ಎಲ್ಲಾ ಬೆಳೆ ಹಾಳಾಯಿತು, ಇನ್ನು ಮಳೆಯಿಂದಾಗಿ 22 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹೋಯಿತು. ಅಂದರೆ, ನಮಗೆ ಬಿತ್ತನೆ ಮಾಡುವುದಕ್ಕೆ ಇರುವ ಪ್ರದೇಶವೇ, ಸುಮಾರು 1 ಲಕ್ಷ 10 ಸಾವಿರ ಹೆಕ್ಟೇರ್ ಪ್ರದೇಶ. ಇದರಲ್ಲಿ ಸುಮಾರು 50 ಲಕ್ಷ ಹೆಕ್ಟೇರ್ ಪ್ರದೇಶಕ್ಕಿಂತ ಹೆಚ್ಚು ಪ್ರದೇಶದಲ್ಲಿ ಬಿತ್ತನೆ ಮಾಡದೆ, ಅವರು ಹಾಕಿದ ಬೆಳೆ ಪ್ರವಾಹದಿಂದ ನಷ್ಟವಾಗಿದ್ದರೆ, ಈ ಸಾರಿ

ರೈತರ ಪರಿಸ್ಥಿತಿ, ಆಹಾರದ ಉತ್ಪಾದನೆ, ಹಳ್ಳಿಗಾಡಿನ ಆರ್ಥಿಕ ಪರಿಸ್ಥಿತಿ ಯಾವ ರೀತಿಯಾಗಿರುತ್ತದೆ ಎಂಬುದು ಊಹಿಸಿಕೊಳ್ಳುವುದಕ್ಕೆ ಸಾಧ್ಯವಾಗದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಆರಿ ನನ್ನ ಪ್ರಕಾರ ಆಹಾರದ ಉತ್ಪಾದನೆ, ನಾವು ನಿರೀಕ್ಷೆ ಮಾಡಿದ 50–60% ಕೂಡ ಆಗುವುದಿಲ್ಲ. ಇವತ್ತು ರೈತರು ಗೊಬ್ಬರಕ್ಕೆ, ಬೀಜಕ್ಕೆ, ವ್ಯವಸಾಯಕ್ಕೆ ಖರ್ಚು ಮಾಡಿದಂಥ ಹಣ ಕೂಡ ಹೋಗಿಬಿಟ್ಟಿದೆ. ಇವತ್ತು ಒಂದು ಅಂದಾಜಿನ ಪ್ರಕಾರ ಬೆಳೆ ನಷ್ಟ ಎಷ್ಟಾಗಿದೆ ಎಂದರೆ 4,000 ಕೋಟಿ ರೂಪಾಯಿಗಳು. ಅದು rain fed area ದಲ್ಲಿ ಮತ್ತು ನೀರಾವರಿ ಪ್ರದೇಶದಲ್ಲಿ, ತೋಟಗಾರಿಕೆ ಮತ್ತು arenial crops ಇವೆಲ್ಲವನ್ನೂ ಸೇರಿಸಿದರೆ 4,000 ಕೋಟಿಯಷ್ಟು ಬೆಳೆ ನಷ್ಟವಾಗಿದೆ. ಸರ್ಕಾರದವರು ಸುಮಾರು 19–20 ಸಾವಿರ ಕೋಟಿ ರೂಪಾಯಿಗಳ ಒಟ್ಟು ಬೆಳೆ ನಷ್ಟವಾಗಿದೆ ಎಂದು ಅಂದಾಜು ಮಾಡಿ, ಕೇಂದ್ರ ಸರ್ಕಾರಕ್ಕೆ ಸಿಆರ್‌ಎಫ್ ಮತ್ತು ಎನ್‌ಸಿಸಿಎಫ್‌ನಲ್ಲಿ 6,665 ಕೋಟಿ ರೂಪಾಯಿಗಳ ಪರಿಹಾರನ್ನು ಕೊಡಬೇಕೆಂದು ಮನವಿಯನ್ನು ಕೊಟ್ಟಿದ್ದಾರೆ. ನಾನು ಈ ಫಿಗರ್ಸ್ ಅನ್ನು ಡಿಸ್ಪ್ಯೂಟ್ ಮಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ, ಬೆಳೆ ನಷ್ಟದ ಬಗ್ಗೆ ಇದುವರೆಗೆ ಸರಿಯಾದ ರೀತಿಯಲ್ಲಿ ಅಸೆಸ್ಮೆಂಟ್ ಆಗಿಲ್ಲ, ಸರ್ವೆ ಕೂಡ ಸರಿಯಾಗಿ ಆಗಿಲ್ಲ. ಮಂತ್ರಿಗಳಾದ ಕಾರಜೋಳರವರೆ, ನಿಮ್ಮ ಬಿಜಾಪುರ, ಬಾಗಲಕೋಟೆ ಜಮಖಂಡಿ, ಮನಹಟ್ಟಿ, ಈ ಕೆಲವು ಭಾಗಗಳಲ್ಲಿ ನೇಕಾರರ ಮನೆಗಳಿಗಲ್ಲಾ ನೀರು ನುಗ್ಗಿ ಮನೆಗಳೆಲ್ಲಾ ಬಿದ್ದುಹೋಗಿ ಅಲ್ಲಿದ್ದಂಥ ಮಗ್ಗಗಳೆಲ್ಲಾ ನಾಶವಾಗಿವೆ, ನನಗಿರುವ ಮಾಹಿತಿಯ ಪ್ರಕಾರ ಇವತ್ತಿನವರೆಗೆ ಅದರ ಅಸೆಸ್ಮೆಂಟೆ ಮಾಡಿಲ್ಲ, ಸರಿಯಾದ ಪರಿಹಾರವನ್ನೂ ಕೊಟ್ಟಿಲ್ಲ. ಪ್ರವಾಹ ಬಂದು ಭೂಮಿ ಬೆಳೆ ಸಹಿತವಾಗಿ ಕೊಚ್ಚಿಕೊಂಡು ಹೋಗಿಬಿಟ್ಟಿದೆ. ವ್ಯವಸಾಯಕ್ಕೆ ಯೋಗ್ಯವಾದ ಮಣ್ಣು ಉಳಿದೇ ಇಲ್ಲ, ಎಲ್ಲಾ ಹೊರಟು ಹೋಗಿಬಿಟ್ಟಿದೆ. ಸುಮಾರು 2–3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಆ ರೀತಿಯಾಗಿದೆ, ಇದು ಒಂದು ಕಡೆ. ಇನ್ನೊಂದು ಕಡೆ ಆ ಪ್ರವಾಹದಿಂದ ಬಂದಂಥ ಮಣ್ಣು–ಮರಳು, ಸಿಲ್ಟ್, ವ್ಯವಸಾಯ ಮಾಡಿ ಬೆಳೆ ಇದ್ದಂಥ ಪ್ರದೇಶದಲ್ಲಿ 5–8 ಅಡಿಯವರೆಗೂ ಕೂಡ ಶೇಖರಣೆಯಾಗಿದೆ. ನಾನು ಸಿಂಧೂರು ತಾಲ್ಲೂಕಿಗೆ ಹೋಗಿದ್ದೆ 5–8 ಅಡಿ ಸಿಲ್ಟ್ ಇತ್ತು ಇವತ್ತಿನವರೆಗೂ ಆ silt ಅನ್ನು ತೆಗೆದಿಲ್ಲ, ಅದಕ್ಕೆ ಎಷ್ಟು ಪರಿಹಾರವನ್ನು ಕೊಡಬೇಕೋ ಅದನ್ನು ಕೊಟ್ಟಿಲ್ಲ. ಆ ಜಮೀನು ನಿರುಪಯುಕ್ತವಾಗಿದೆ, ಈ ಮಣ್ಣೆಲ್ಲಾ

ಕೊಚ್ಚಿಕೊಂಡು ಹೋಗಿ ಏನು ಬೆಳೆ ನಷ್ಟವಾಗಿದೆ ಅದಕ್ಕೆ ಇದುವರೆಗೆ ಪರಿಹಾರ ಕೊಡುವುದಕ್ಕಾಗಿಲ್ಲ, ಇವತ್ತಿನವರೆಗೆ ಅದರ ಅಸೆಸ್ಮೆಂಟ್ ಆಗಿಲ್ಲ. ಆಮೇಲೆ ನೀವು ಇನ್‌ಚಾರ್ಜ್ ಇರುವ ಪಕ್ಕದ ಜಿಲ್ಲೆಯಲ್ಲೆ, ಆ ದೋಣಿ ಹಳ್ಳ ಆ ನದಿಯ ಕೋರ್ಸ್ ಬದಲಾವಣೆಯಾಗಿದೆ. ಎಲ್ಲೆಲ್ಲಿ ಭೂಮಿ ಮೆತ್ತಗಿದೆಯೋ ಅಲ್ಲಿಂದ ಮಣ್ಣನ್ನೆಲ್ಲಾ ಎತ್ತಿಕೊಂಡು ಹೋಗಿಬಿಟ್ಟಿದೆ.

ಬೆಣ್ಣೆ ಹಳ್ಳ ಹಾಗೆ ಮಾಡಿದ್ದಾರೆ. ಅದು ಇವತ್ತಿನದು ಅಲ್ಲ. ಬಹಳ ವರ್ಷಗಳಿಂದ ದೋಣಿ ಹಳ್ಳ ಹಾಗೆ ಮಾಡುತ್ತಿದ್ದಾರೆ. ಈಗ ಜಾಲಿ ಗಿಡಗಳು ಬಂದಿವೆ. ದಡದಲ್ಲಿ ಜಾಲಿ ಗಿಡಗಳೆಲ್ಲಾ ಬೆಳೆದು ಒಳಗೆಲ್ಲಾ ನುಗ್ಗಿದೆ. ಅದು ಬೆಳೆದು ಎಲ್ಲೆಲ್ಲೋ ಹೊರಟು ಹೋಗಿ ಬಿಟ್ಟಿದೆ. ಅದರ ನದಿ ಪಾತ್ರ ಪ್ರತಿ ಸಾರಿ ಪ್ರವಾಹ ಬಂದಾಗ ಬದಲಾವಣೆ ಆಗುತ್ತಾ ಹೋಗುತ್ತದೆ. ಅಲ್ಲಿ ಬಹಳ ಜನ ರೈತರು 2007 ರಲ್ಲಿ ಶಿಲ್ಟ್ ತೆಗೆಯಿರಿ ಎಂದು ಹೇಳಿದ್ದಾರೆ. ಅದಕ್ಕೆ 500 ಕೋಟಿ ರೂ. ಖರ್ಚಾಗಬಹುದು ಎಂದು ಹೇಳಿದ್ದಾರೆ. ತೆಗೆಯುವುದಕ್ಕೆ ಹೋಗಲಿಲ್ಲ. ಹಾಗೆಯೇ ಇದೆ. ಇವತ್ತು ಅದರಿಂದ ದೊಡ್ಡ ಅನಾಹುತ ಆಗಿ ಸಾವಿರಾರು ಎಕರೆ, ನೂರಾರು ಕೋಟಿ ರೂಪಾಯಿ ರೈತರಿಗೆ ಹಾನಿ ಆಗಿದೆ. ಅದಕ್ಕೆ ನೀವು ಏನೂ ಪರಿಹಾರ ಕೊಡಲಿಲ್ಲ. ನೀವು ಪರಿಹಾರ ಕೊಟ್ಟಿರುವುದು, ಮನೆಗಳಿಗೆ ಮಾತ್ರ. ಬೆಳೆ ನಾಶಕ್ಕೆ ಸ್ವಲ್ಪ ಪರಿಹಾರ ಕೊಟ್ಟಿದ್ದಾರೆ. ಅದು ಎಲ್ಲರಿಗೂ ಕೊಟ್ಟಿಲ್ಲ. ಅದನ್ನಾದರೂ ಕೂಡ ಮಾನವೀಯತೆಯಿಂದ ಕೊಟ್ಟಿದ್ದೀರಾ, ನಿಷ್ಪಕ್ಷಪಾತವಾಗಿ ಕೊಟ್ಟಿದ್ದೀರಾ, ರಾಜಕೀಯರಹಿತವಾಗಿ ಕೊಟ್ಟಿದ್ದಾರಾ ಅದು ಯಾವುದೂ ಇಲ್ಲ. ಮನೆಗಳಿಗೆ ಪಕ್ಕಾ ಮನೆಗಳು ಮತ್ತು ಕಚ್ಚಾ ಮನೆಗಳು ಎಂದು ಮಾಡಿ ಅದನ್ನು ತೀರ್ಮಾನ ಮಾಡುವುದು ಅಧಿಕಾರಿಗಳು. ಅವರು ಏನು ಮಾಡುತ್ತಾರೆ, ಯಾರು ಪ್ರಭಾವಶಾಲಿಗಳು ಇರುತ್ತಾರೆ ಅವರ ಮಾತುಗಳನ್ನು ಕೇಳಿಕೊಂಡು ಅವರು ಹೇಳಿದ ಹಾಗೆ ಬೆಲೆ ನಿಗದಿ ಮಾಡಿದ್ದಾರೆ. ಪಕ್ಕಾ ಮನೆಗಳು ಸಂಪೂರ್ಣವಾಗಿ ಬಿದ್ದು ಹೋಗಿದ್ದರೂ ಕೂಡ 37,000 ರೂಪಾಯಿಗಳನ್ನು ಕೊಟ್ಟಿದ್ದಾರೆ. CRF ನಾರ್ಮ್ಸ್ ಪ್ರಕಾರ 37,000 ರೂಪಾಯಿಗಳು ಕೊಡಬೇಕೆಂದು ಇದೆ. ಒಂದು ಸಾವಿರ ರೂ. ಬಟ್ಟೆಗಳಿಗೆ, ಒಂದು ಸಾವಿರ ರೂಪಾಯಿ ಪಾತ್ರೆ ಪದಾರ್ಥಗಳಿಗೆ ಕೊಡಬೇಕೆಂದು ಇದೆ. 37,000 ರೂ.ಗಳು ಕೊಡಬೇಕು. ಅನೇಕ ಕಡೆಗಳಲ್ಲಿ ಪಕ್ಕಾ ಮನೆಗಳು ಬಿದ್ದು ಹೋಗಿದ್ದರೂ ಕೂಡ 37,000 ರೂಪಾಯಿಗಳನ್ನು ಕೊಟ್ಟಿಲ್ಲ. 5,000, 7,000, 2,000 ಹಾಗೂ 3,000 ರೂಪಾಯಿಗಳು ಹೀಗೆಲ್ಲಾ ಕೊಟ್ಟಿದ್ದಾರೆ. ಕೆಲವು ಕಡೆ ಮನೆ

ಬೀಳದೆ ಇರುವುದಕ್ಕೆ ಕೂಡ 37,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಪತ್ರಿಕೆಯಲ್ಲಿ ಬಂದಿತ್ತು. ಜಮಖಂಡಿಯಲ್ಲಿ ಒಬ್ಬರು ಜಿಲ್ಲಾ ಪಂಚಾಯತಿ ಸದಸ್ಯರ ಮನೆಯವರು, ನಿಮ್ಮದೇ ಜಿಲ್ಲೆ ನೀವೇ ಅದಕ್ಕೆ ಇನ್‌ಛಾರ್ಜ್ ಇದ್ದೀರಿ ಪತ್ರಿಕೆಯಲ್ಲಿ ನೀವು ಓದಿರಬಹುದು. ಈ ಜಿಲ್ಲೆಯಲ್ಲಿ ಮನೆಗಳೇ ಬಿದ್ದಿಲ್ಲ 37,000 ರೂಪಾಯಿಗಳನ್ನು ನೀಡಿದ್ದಾರೆ. ಬಿಜಾಪುರ ಜಿಲ್ಲೆಗೆ ಒಂದು ರೀತಿ, ಬಾಗಲಕೋಟೆ ಜಿಲ್ಲೆಗೆ ಒಂದು ರೀತಿ. ಬಾಗಲಕೋಟೆ ಜಿಲ್ಲೆಯಲ್ಲಿ ಕೊಟ್ಟಿರತಕ್ಕಂತಹ ಪರಿಹಾರವನ್ನು ಬಿಜಾಪುರ ಜಿಲ್ಲೆಯಲ್ಲಿ ಕೊಟ್ಟಿಲ್ಲ. ನಾರಮ್ಸ್‌ನಲ್ಲಿ ಎರಡೆರಡು ಯಾರ್ಡ್‌ಸ್ಟಿಕ್ ಇದೆಯೇ? ಪಕ್ಕ ಪಕ್ಕದ ಜಿಲ್ಲೆಗಳು ಬಿಜಾಪುರ ಜಿಲ್ಲೆಗೆ ಒಂದು ರೀತಿಯ ಪರಿಹಾರ, ಬಾಗಲಕೋಟೆ ಜಿಲ್ಲೆಗೆ ರೀತಿಯ ಪರಿಹಾರ. ಪಕ್ಕದ ತಾಲ್ಲೂಕುಗಳಿಗೆ ಕೊಟ್ಟಿಲ್ಲ. ನಮ್ಮ ಶಾಸಕರಾದ ಮಾನ್ಯ ಬಿ.ಸಿ. ಪಾಟೀಲರು ಅವರ ತಾಲ್ಲೂಕಿನಲ್ಲಿ ಎಲ್ಲರಿಗೂ ಸಾರಾಸಗಟಾಗಿ ಕೊಟ್ಟಿದ್ದಾರೆಂದು ಹೇಳಿದರು. ಅವರದು ಪಕ್ಕಾ ಮನೆ ಅದರೂ ಆಗಲಿ, ಕಚ್ಚಾ ಮನೆ ಆದರೂ ಆಗಲಿ, ಸಂಪೂರ್ಣ ಬಿದ್ದು ಹೋಗಿರಲಿ, ಪಾರ್ಷಿಯಲ್ ಆಗಿ ಬಿದ್ದು ಹೋಗಿರಲಿ, ಎಲ್ಲರಿಗೂ ತೆಗೆದುಕೊಂಡು ಹೋಗಿ ಎಂದು ಕೊಟ್ಟು ಬಿಟ್ಟಿದ್ದಾರೆ. ಇದು ನಾನು ಹೇಳೂವುದು ಅಲ್ಲ. ಮಾನ್ಯ ಲೋಕಾಯುಕ್ತರು ಮಾನ್ಯ ಮುಖ್ಯ ಕಾರ್ಯದರ್ಶಿಯವರಿಗೆ 11.11.09 ರಲ್ಲಿ ಒಂದು ಪತ್ರ ಬರೆದಿದ್ದಾರೆ ಅವರು ಅವರ ವರದಿಯಲ್ಲಿ ಈ ತರಹ ತಾರತಮ್ಯಗಳು ನಡೆದಿವೆ ಎಂದು ಹೇಳಿರುವುದು, ಅಲ್ಲಿ ನೋಡಲ್ ಆಫೀಸರ್‌ಗಳು ಸರಿಯಾದ ರೀತಿಯಲ್ಲಿ ಅವರ ಜವಾಬ್ದಾರಿಯನ್ನು ನಿರ್ವಹಿಸಿಲ್ಲ, ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕೊಟ್ಟಿದ್ದಾರೆ, ಇದೆಲ್ಲಾ ಅವರು ಅವರ ವರದಿಯಲ್ಲಿ ಹೇಳಿದ್ದಾರೆ. ಲೋಕಾಯುಕ್ತರು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಇದೆಲ್ಲವನ್ನೂ ಸರಿಪಡಿಸಿ ಎಂದು ಹೇಳಿದರೂ ಕೂಡ ಇವತ್ತಿನವರೆಗೆ ಸರಿಪಡಿಸುವುದಕ್ಕಾಗಲಿಲ್ಲ. ಅದಕ್ಕೋಸ್ಕರ ಇವತ್ತು ಅನೇಕ ಭಾಗಗಳಲ್ಲಿ ಚಳುವಳಿಗಳು ಪ್ರಾರಂಭವಾಗಿವೆ. ಉಪವಾಸ ಸತ್ಯಾಗ್ರಹಗಳು ನಡೆಯುತ್ತಿವೆ. ನರಗುಂದ, ನವಲಗುಂದ, ರೋಣ, ಸವದತ್ತಿ, ಅನೇಕ ತಾಲ್ಲೂಕುಗಳಲ್ಲಿ ಇವತ್ತು ಚಳುವಳಿಗಳು ಹಾಗೂ ಸತ್ಯಾಗ್ರಹಗಳು ಕಳೆದ 15 ದಿವಸಗಳಿಂದ ನಡೆಯುತ್ತಿವೆ. ನಾನು ಕೂಡ ಬಾಗಲಕೋಟೆಗೆ ಹೋಗುವ ದಾರಿಯಲ್ಲಿ ನರಗುಂದಕ್ಕೆ ಹೋಗಿದ್ದೆ, ನರಗುಂದಕ್ಕೆ ರೈತರೆಲ್ಲಾ ಚಳುವಳಿ ಕೂತಿದ್ದರು. ಅವರು ಮನವಿ ಕೂಡ ಕೊಟ್ಟಿದ್ದಾರೆ. ರೈತರ ಬೇಡಿಕೆಗಳು ಹಲವಾರು ಇವೆ. ನಮಗೆ ಸರಿಯಾದ ರೀತಿಯಲ್ಲಿ ಮನೆಗಳ

ಪರಿಹಾರ ಕೊಡಲಿಲ್ಲ, ತಾರತಮ್ಯ ಮಾಡಿದ್ದಾರೆ, ರಾಜಕೀಯ ಮಾಡಿದ್ದಾರೆ, ರೂಲಿಂಗ್ ಪಾರ್ಟಿಯವರು ಹೇಳಿದವರಿಗೆ ಒಂದು ರೀತಿ ಕೊಟ್ಟಿದ್ದಾರೆ, ವಿರೋಧ ಪಕ್ಷದವರಿಗೆ ಒಂದು ರೀತಿ ಕೊಟ್ಟಿದ್ದಾರೆ, ರೂಲಿಂಗ್ ಪಾರ್ಟಿಯವರು ಹೇಳಿದರೆ, ಮನೆ ಬೀಳದೆ ಇರುವವರಿಗೂ, ಪಕ್ಕಾ ಮನೆ ಇರುವವರಿಗೂ ಕೂಡ 37,000 ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ನಾನು ಹೇಳುವುದಲ್ಲ. ಅಲ್ಲಿ ಚಳುವಳಿ ಮಾಡುತ್ತಿರುವ ಜನ ಹೇಳುತ್ತಿರುವುದು, ಇವತ್ತಿಗೂ ಚಳುವಳಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದವರಿಗೆ ಒಂದು ತರಹ, ಜೆಡಿಎಸ್‌ನವರಿಗೆ ಒಂದು ತರಹ, ಬಿಜೆಪಿಯವರಿಗೆ ಒಂದು ತರಹ ಕೊಟ್ಟಿದ್ದಾರೆ. ಜಮಖಂಡಿಯಲ್ಲಿ ಹೇಗಾಯಿತು ಹಾಗಾದರೆ, ಜಮಖಂಡಿಯಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯರ ಮನೆ ಬೀಳದೆ ಇದ್ದರೂ ಅವರಿಗೆ 37,000 ಹೇಗೆ ದೊರಕಿತು, ಎಷ್ಟು ಕ್ರಿಮಿನಲ್ ಕೇಸ್‌ಗಳು ಬುಕ್ ಆಗಿವೆ, ಇದು ನಾನು ಹೇಳುತ್ತಿರುವುದು ಅಲ್ಲ, ಲೋಕಾಯುಕ್ತರವರು ಅವರ ವರದಿಯಲ್ಲಿ ಹೇಳಿದ್ದಾರೆ. ಅಧಿಕಾರಿಗಳು ಅವರಿಗೆ ಬೇಕಾದವರಿಗೆ ಚೆಕ್ ಬೇಗ ಕ್ಯಾಶ್ ಮಾಡಿಸುವುದು, ಅವರಿಗೆ ಬೇಡದ ಇರುವವರಿಗೆ ಆ ಚೆಕ್ ಕ್ಯಾಶ್ ಆಗದೆ ಹಾಗೆಯೇ ಇರಬೇಕು. ಈ ತರಹ discrimination on the lines of the parties ನೀವು ಮಾಡುವುದಾದರೆ, ಜನರಿಗೆ ನ್ಯಾಯ ಕೊಡತಕ್ಕಂತಹ ಸರ್ಕಾರನಾ ಇದು? ಇದೇನಾ ಕೊಡತಕ್ಕಂತಹ ನ್ಯಾಯ ನೀವು? ನಮ್ಮ ಕಾರಜೋಳರವರು ತಲೆ ಆಡಿಸುತ್ತಿದ್ದಾರೆ, ಇವೆಲ್ಲಾ complaints ಬಂದಿರುವುದು. ನಿಮ್ಮ ಪಾರ್ಟಿಯವರಿಗೆ ಒಂದು ತರಹ, ನಮ್ಮ ಪಾರ್ಟಿಯವರಿಗೆ ಒಂದು ತರಹ. ಮಾನ್ಯ ಮುಖ್ಯ ಮಂತ್ರಿಗಳೇ ಇವೆಲ್ಲಾ ನಿಮಗೆ ಗೊತ್ತಾಗುವುದಿಲ್ಲ. ನೀವೇನು ಅಲ್ಲಿಗೆ ಹೋಗಿದ್ದಿರಾ? ನೀವು ಹೆಲಿಕಾಪ್ಟರ್‌ನಲ್ಲಿ ಹೋಗಿ ಬಂದುಬಿಡುತ್ತೀರಿ. ಅದು ನಿಮಗೆ ಗೊತ್ತಾಗುವುದಿಲ್ಲ. ಬಳಗೋಳ ಎಂಬ ಗ್ರಾಮ ಈ ಊರಿನಲ್ಲಿ ಮಠಪತಿ ಫಕೀರಯ್ಯ ಬಸಯ್ಯ ರೋಣ ತಾಲ್ಲೂಕು.

ಇದನ್ನು ನಾನು ಬರೆದುಕೊಂಡು ಬಂದಿರುವುದಲ್ಲ, ಇವಷ್ಟು ಕೂಡ ಸಂಕಷ್ಟಕ್ಕೆ ಸಿಲುಕಿರುವಂತಹ ಬರಪೀಡಿತ ಪ್ರದೇಶದ ಜನರು ಕಳುಹಿಸಿ ರುವುದು. ಅದು ಆಯಿತು, ಈಗ ನೀವು ಬಳ್ಳಾರಿ ಜಿಲ್ಲೆಗೆ ಬನ್ನಿ. ಬಳ್ಳಾರಿ ಜಿಲ್ಲೆಯಲ್ಲಿ ಸಿರಗುಪ್ಪ ತಾಲ್ಲೂಕಿನ ಶಿಫ್ಟ್ ಮಾಡಬೇಕಾದಂತಹ ಅನೇಕ ಹಳ್ಳಿಗಳಿಗೆ ಬೇಕಾಗಿರುವಂತಹ ಜಮೀನನ್ನು ಹಳ್ಳಿಯ ರೈತರ ಹತ್ತಿರ

ತೆಗೆದುಕೊಂಡು ಕ್ರಯಪತ್ರ ರಿಜಿಸ್ಟರ್ ಮಾಡಿದ್ದರೂ ಕೂಡ, ಅಲ್ಲಿನ ಸಿರಗುಪ್ಪ ಶಾಸಕರು, ನಾನು ಇಲ್ಲದಿರುವಾಗ ಕಾಂಗ್ರೆಸ್ಸ್ ಮತ್ತು ಜೆಡಿಎಸ್‌ರವರ ಹತ್ತಿರ ಜಮೀನನ್ನು ಖರೀದಿ ಮಾಡಿಬಿಟ್ಟಿದ್ದೀರಿ, ಆದುದರಿಂದ ಅದನ್ನು ಕ್ಯಾನ್ಸಲ್ ಮಾಡಿ, ನಾನು ಹೇಳಿದ ಕಡೆ ಜಮೀನು ಖರೀದಿ ಮಾಡಬೇಕೆಂದು ಹೇಳಿರುವ ಕಾರಣ ಸಿರಗುಪ್ಪ ತಹಶೀಲ್ದಾರ್ ನೋಟೀಸ್ ಕೊಟ್ಟಿದ್ದಾರೆ. ಅವೆಲ್ಲ ಆಗಲೇ ಸೇಲ್‌ಡೀಡ್ ಆಗಿವೆ. ಈ ತಾರತಮ್ಯ ಏನೆಂದು ಕರೆಯಬೇಕು? ಈಗಾಗಲೇ ಹಳ್ಳಿಗಳಲ್ಲಿ ಜಮೀನುಗಳನ್ನು ತೆಗೆದುಕೊಂಡು ಕ್ರಯಪತ್ರ ಆಗಿದ್ದರೂ ಕೂಡ ಅಲ್ಲಿ ಎಂಎಲ್‌ಎ, ನಾನು dissidents activities ನಡೆಯುತ್ತಿದ್ದರಿಂದ ಹೈದಾರಾಬಾದ್‌ಗೆ ಹೋಗಿದ್ದೆ, ನಾನು ಇಲ್ಲಿ ಇಲ್ಲದಿರುವಾಗ ನನ್ನ absence ನಲ್ಲಿ ನೀವು ಕ್ರಯಪತ್ರ ಬರೆಸಿಕೊಂಡಿದ್ದೀರಿ, ನೀವು ಜಮೀನುಗಳನ್ನು ಕಾಂಗ್ರೆಸ್ಸ್ ಮತ್ತು ಜೆಡಿಎಸ್‌ನವರ ಹತ್ತಿರ ಏಕೆ ತೆಗೆದುಕೊಂಡಿದ್ದೀರಿ ಎಂದು ಈ ರೀತಿ ಮಾಡಿದ್ದಾರೆ. ನೋಡಿ ಇವೆಲ್ಲ ಕ್ರಯಪತ್ರ ಆಗಿರುವುದು, ಕ್ರಯಪತ್ರ ಆಗಿದ್ದರೂ ಕೂಡ cancel ಮಾಡಿ ಎಂದು ನೋಟಿಸ್ ಕೊಟ್ಟಿದ್ದಾರೆ. ಪಾಪ ಸಿರಗುಪ್ಪ ತಹಸೀಲ್ದಾರ್ ಯಾರೋ ಇವರಿಗೆ ಹೆದರಿಕೊಂಡು ಬದಲಾವಣೆಯಾಗಿದ್ದಾರೆ. ಈಗ ಅಲ್ಲಿ ಊರುಗಳಲ್ಲಿ ಜನ ದೊಡ್ಡ ರ್‍ಯಾಲಿ ಮೂಲಕ ಪ್ರತಿಭಟನೆ ಮಾಡಿದ್ದಾರೆ. ನೋಡಿ, ಇದು ತಹಸೀಲ್ದಾರ್ ಕೊಟ್ಟಿರುವಂತಹ ನೋಟಿಸ್. ಅದರಲ್ಲಿ ಏನು ಹೇಳಿದ್ದಾರೆಂದರೆ ಸಿರಗುಪ್ಪ ತಾಲ್ಲೂಕಿನ ಒಂದು ಹೋಬಳಿಯ ಹೊನ್ನಾರಳ್ಳಿ ಗ್ರಾಮದ ಸರ್ವೆ ನಂಬರ್ 77ಎ, 3ಬಿ ಪೈಕಿ ಹತ್ತು ಎಕರೆ ಮತ್ತು ಸರ್ವೆ ನಂಬರ್ 3ಬಿ ನಲ್ಲಿ 9.30 ಎಕರೆ ಜಮೀನನ್ನು ಸರ್ಕಾರಕ್ಕೆ ದಿನಾಂಕ: 30.10.2009ರಂದು ರಿಜಿಸ್ಟರ್ ನಂಬರ್ 3092, 2009–2010 ಮತ್ತು 3193, 2009–10ರ ಪ್ರಕಾರ ತಾವು ರಿಜಿಸ್ಟರ್ ಮಾಡಿಸಿರುತ್ತೀರಿ. ಆ ಜಮೀನಿನ ಒಟ್ಟು ವಿಸ್ತೀರ್ಣ 22.62 ಎಕರೆ ಜಮೀನಿನ ಪೈಕಿ ಒಂದು ಎಕರೆಗೆ ನಾಲ್ಕು ಲಕ್ಷ ರೂಪಾಯಿ ಪ್ರಕಾರ 90.48 ಲಕ್ಷ ರೂಪಾಯಿ ಆಗುವ ಮೊತ್ತವನ್ನು ಚೆಕ್ ನಂಬರ್ 238589 ಮತ್ತು 238590 ಪ್ರಕಾರ ತೆಗೆದುಕೊಂಡಿರುತ್ತೀರಿ. ಆದರೆ ಆ ಒಟ್ಟು ವಿಸ್ತೀರ್ಣದಲ್ಲಿ ಸರ್ಕಾರಕ್ಕೆ ಬೇಕಾದ ವಿಸ್ತೀರ್ಣ ಕೇವಲ 5.93 ಎಕರೆ ಮಾತ್ರ, ಉಳಿದ ವಿಸ್ತೀರ್ಣ 16.59 ಎಕರೆ ಜಮೀನನ್ನು ತಾವು ಹಿಂದಕ್ಕೆ ಪಡೆಯತಕ್ಕದ್ದು ಎಂದು ಹೇಳಿದ್ದೀರಿ. ಕ್ರಯ ಬರೆಸಿಕೊಂಡಿರುವವರು ಯಾರು? ಇದು ಹುಡುಗಾಟವೇ? ಇದು ಸರ್ಕಾರ ನಡೆದುಕೊಳ್ಳುವ

ರೀತಿಯೇ? ಈಗ ತಹಸೀಲ್ದಾರ್ ನೋಟಿಸ್ ಕೊಟ್ಟಿದ್ದಾರೆ. ಒಂದು ಎಕರೆಗೆ ನಾಲ್ಕು ಲಕ್ಷ ರೂಪಾಯಿಯಂತೆ ತೀರ್ಮಾನ ಮಾಡಿ ಕ್ರಯ ಬರೆಸಿಕೊಂಡು, ಸಿರಗುಪ್ಪ ತಾಲ್ಲೂಕಿನ ವಿರೂಪಾಕ್ಷಪ್ಪಗೌಡ ತಂದೆ ಬಾಪ್ಪುರ ಲಿಂಗನಗೌಡ ಮತ್ತು ಪಿ. ಶಂಕರಗೌಡ ತಂದೆ ಸಿದ್ಧನಗೌಡ, ಹೊನ್ನಳ್ಳಿ ಗ್ರಾಮ, ಈ ಇಬ್ಬರಿಗೂ ನೋಟಿಸ್ ಕೊಟ್ಟಿದ್ದಾರೆ. ಇದು ಕ್ರಯ ಪತ್ರದ ಕಾಪಿ. ತಹಸೀಲ್ದಾರ್, ಅಸಿಸ್ಟೆಂಟ್ ಕಮಿಷನರ್, ಡಿಸಿ ನೋಡಿ ಸ್ಥಳ ಪರಿಶೀಲನೆ ಮಾಡಿ, ಜನಗಳ ಅಭಿಪ್ರಾಯ ಕೇಳಿ, ಈ ಜಾಗ ಸೂಕ್ತವಾಗಿದೆ, ಸ್ಥಳಾಂತರ ಮಾಡುವುದಕ್ಕೆ ಯೋಗ್ಯವಾಗಿದೆ ಎಂದು ಹೇಳಿ ಅದನ್ನು ಖರೀದಿ ಮಾಡಿದ ಮೇಲೆ ಕೂಡ ಅಂದು ಅಲ್ಲಿ ಎಂಎಲ್‌ಎ ಇರಲಿಲ್ಲವೆನ್ನುವ ಕಾರಣಕ್ಕೆ ಮತ್ತು ಅಲ್ಲಿ ಬೇರೆ ಪಕ್ಷದವರ ಸೈಟ್ ತೆಗೆದುಕೊಂಡಿದ್ದಾರೆ ಎನ್ನುವ ಕಾರಣಕ್ಕೆ ಎಂಎಲ್‌ಎ ಬಂದು ರದ್ದು ಮಾಡಿಸುವುದಕ್ಕೆ ನೋಟಿಸ್ ಕೊಡಿಸಿದ್ದಾರಲ್ಲ, ಇದನ್ನು ರಾಜಕಾರಣ ಎಂದು ಕರೆಯಬೇಕೋ ಅಥವಾ ಏನೆಂದು ಕರೆಯ ಬೇಕು? ಇದು ನ್ಯಾಯಯುತವಾಗಿ ನಡೆದುಕೊಳ್ಳುವಂತಹ ಸರ್ಕಾರವೇ? ಇದನ್ನು ತಾರತಮ್ಯ ಎಂದು ಹೇಳುವುದಕ್ಕೆ ಬರುವುದಿಲ್ಲವೇ? ಈ ರೀತಿ ಉದಾಹರಣೆಗಳು ಬೇಕಾದಷ್ಟು ಇವೆ, ಅವೆಲ್ಲವನ್ನು ಕೂಡ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಈ ರೀತಿ ಅನೇಕ ಊರುಗಳಲ್ಲಾಗಿದೆ. ಬೃಂದಾವನ ಕ್ಯಾಂಪ್, ಚಿಕ್ಕಬಳ್ಳಾರಿ ಗ್ರಾಮ, ಪಂತಲಚಿಂತ, ಹೊನ್ನಾರಳ್ಳಿ ಈ ಹಳ್ಳಿಗಳಲ್ಲಿ ಜಮೀನು ತೆಗೆದುಕೊಂಡು ಕ್ರಯಪತ್ರ ಬರೆಸಿಕೊಂಡು, ಈಗ ಅವರಿಗೆ ನಿಮ್ಮ ಜಮೀನು ಬೇಡ, ಎಂಎಲ್‌ಎ ಒಪ್ಪುತ್ತಿಲ್ಲ, ಅವರು ಬೇರೆ ಕಡೆ. ಜಮೀನು ತೆಗೆದುಕೊಳ್ಳುವುದಕ್ಕೆ ಹೇಳಿದ್ದಾರೆಂದು ಹೇಳುವುದು. ಇನ್ನೊಂದು ತಮಾಷೆ ಏನೆಂದರೆ ಅಲ್ಲಿ ಕಡಿಮೆ ರೇಟ್‌ಗೆ ತೆಗೆದುಕೊಂಡು ಸರ್ಕಾರಕ್ಕೆ ನಾಲ್ಕು ಲಕ್ಷ ರೂಪಾಯಿಗೆ ಮಾರುವುದು. ಎಲ್ಲಿ ಯೋಗ್ಯವಾದ ಜಾಗ ಇದೆ. ಅದನ್ನು ಬಿಟ್ಟು ಮೂರು ಕಿಲೋಮೀಟರ್ ದೂರದಲ್ಲಿ ಎಂಎಲ್‌ಎ ಸಜೆಸ್ಟ್ ಮಾಡಿದ್ದಾರೆಂದು, ಅಲ್ಲಿ ಒಂದು ಲಕ್ಷ ರೂಪಾಯಿಗೆ ಜಮೀನು ಸಿಗುತ್ತದೆ ಎಂದು ರೈತರ ಹತ್ತಿರ ಒಂದು ಲಕ್ಷ ರೂಪಾಯಿಗೆ ಮಾತನಾಡಿ ಜಮೀನು ತೆಗೆದುಕೊಂಡು ನಾಲ್ಕು ಲಕ್ಷ ರೂಪಾಯಿಗೆ ಮಾರಾಟ ಮಾಡುವುದು. ನೋಡಿ ಇದು ಎಲ್ಲಿಯವರೆಗೆ ಹೋಗಿದೆ. ಇದು ಸಿರಗುಪ್ಪ ತಾಲ್ಲೂಕಿನಲ್ಲಿ ನಡೆದಿರುವಂಥ ಘಟನೆ. ಮಾನ್ಯ ಅಧ್ಯಕ್ಷರೇ, ಇದನ್ನು ನಾನು ಕಳುಹಿಸಿ ಕೊಡುತ್ತೇನೆ, ಇದನ್ನು ಅವರು ವಿಚಾರ ಮಾಡಲಿ. ಬಳ್ಳಾರಿ ಜಿಲ್ಲೆಯಲ್ಲಿ ಈ ರೀತಿಯಾಗುತ್ತಿದೆ. ಈ ರೀತಿ ಸರ್ಕಾರವೇ ಅಧಿಕಾರಿಗಳಿಗೆ ಒತ್ತಡ ಹಾಕಿ,

ನಂತರ ನೀವು ಮಾಡುತ್ತಿರುವುದು ಸರಿಯಿಲ್ಲವೆಂದರೆ ಅಧಿಕಾರಿಗಳು ಯಾವ ಧೈರ್ಯದ ಮೇಲೆ ಮಾಡುತ್ತಾರೆ? ಯಾವ ಧೈರ್ಯದ ಮೇಲೆ ಪರಿಹಾರ ಕೊಡುವುದಕ್ಕೆ ಅವರು ಹೋಗುತ್ತಾರೆ? ಬಳ್ಳಾರಿ ಯಲ್ಲಿಯಂತೂ ಯಡಿಯೂರಪ್ಪನವರು ಎಲ್ಲಾ ಅಧಿಕಾರಿಗಳನ್ನು ಒಂದು ಬಾರಿ ವರ್ಗಾವಣೆ ಮಾಡಿ ಮತ್ತೇ ಎಲ್ಲಾ ಅಧಿಕಾರಿಗಳನ್ನು ಅಲ್ಲಿಗೆ ವಾಪಸ್ಸು ಹಾಕಿಬಿಟ್ಟಿದ್ದಾರೆ. ಅದೂ ಅಲ್ಲಿ ನೆರೆಹಾವಳಿ ಆಗಿರುವಾಗ ಅಲ್ಲಿರುವಂತಹ ಎಲ್ಲಾ 64 ಅಧಿಕಾರಿಗಳನ್ನು ಬಳ್ಳಾರಿಯಲ್ಲಿ ದೊಡ್ಡ ಅನಾಹುತ ನಡೆಯುತ್ತಿದೆ, ಇಲ್ಲೀಗಲ್ ಆಕ್ಟೀವಿಟೀಸ್ ನಡೆಯುತ್ತಿದೆ, ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದ್ದಾರೆ ಎಂದು ಹೇಳಿ ವರ್ಗಾವಣೆ ಮಾಡಿ ಮತ್ತೆ ಆ 64 ಅಧಿಕಾರಿಗಳನ್ನು ಅಲ್ಲಿಗೆ ವಾಪಸ್ಸು ಹಾಕಿದರೆ ಏನು ಮಾಡುತ್ತಾರೆ? ಅವರು ಯಾರ ಮಾತನ್ನು ಕೇಳುತ್ತಾರೆ? ಅಲ್ಲಿ administration ಇದೆಯಾ? There is a total administration collapse in a situation like this. ಬರ ಪರಿಹಾರ ಕೊಡತಕ್ಕಂಥ ಸಂದರ್ಭದಲ್ಲಿ 15 ದಿನ ಸರ್ಕಾರವೇ ಇರಲಿಲ್ಲ. ಮಾನ್ಯ ಯಡಿಯೂರಪ್ಪನವರು ಒಂದು ವಾರ ದಿಲ್ಲಿಗೆ ಹೋಗಿ ಕುಳಿತಿದ್ದರು. ರೆವಿನ್ಯೂ ಮಂತ್ರಿಗಳು ಎಲ್ಲಿಗೆ ಹೋಗಿದ್ದರು ಗೊತ್ತಿಲ್ಲ. ಕೆಲವು ಮಂತ್ರಿಗಳು ಹೈದರಾಬಾದಿಗೆ ಹೋಗಿ ಹೋಟೆಲ್‌ನಲ್ಲಿ ಕುಳಿತಿದ್ದರು. ಮಾನ್ಯ ಮುಖ್ಯಮಂತ್ರಿ ಗಳು ಡೆಲ್ಲಿಗೆ ಹೋಗಿದ್ದರು, ಅಲ್ಲಿಂದ ಬಂದು 64 ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದರು. ನನಗೆ ಇರುವ ಅನುಭವದಲ್ಲಿ ಜ್ಞಾಪಕ ಇರುವ ಹಾಗೆ ಕರ್ನಾಟಕದಲ್ಲಿ ಈ ರೀತಿ ಅಧಿಕಾರಿಗಳ ಆತ್ಮಸ್ಥೈರ್ಯವನ್ನು ಕುಂದಿಸತಕ್ಕಂಥ ಕೆಲಸ ಯಾವ ಕಾಲದಲ್ಲಿ ಕೂಡ ಆಗಿರಲಿಲ್ಲ, ಆದರೆ ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ ಆಗಿದೆ.

(12-00 PM)

ಕರ್ನಾಟಕದ ಇತಿಹಾಸದಲ್ಲಿ ಈ ರೀತಿಯಾಗಿ ಪರಸ್ಪರ ಅಂತಃಕಲಹವಾಗಿದ್ದು, ಪಕ್ಷದೊಳಗೆ ಜಗಳವಾಗಿದ್ದು, ಎಂದೂ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಅವರ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ, ಬಳ್ಳಾರಿ ಜಿಲ್ಲಾ ಮಂತ್ರಿಗಳು ಏನು ಹೇಳುತ್ತಾರೋ, ಅದನ್ನು ಕೇಳಲೇ ಬೇಕು. ಅದಕ್ಕೆ ನನ್ನದು ಏನು ತಕರಾರು ಇಲ್ಲ, ಕೇಳಲಿ. ತಾವು 64 ಜನ officers ಗಳನ್ನು ಏಕೆ transfer ಮಾಡಿದಿರಿ? ಮತ್ತೆ ಅದೇ ಎಲ್ಲಾ ಅಧಿಕಾರಿಗಳನ್ನು ಅದೇ ಜಾಗಗಳಿಗೆ ಹಾಕಿದ್ದೀರಿ. ಅದೇ ಎಸ್.ಪಿ ಅದೇ ಜಾಗಕ್ಕೆ, ಅದೇ ಡಿ.ಸಿ

ಅದೇ ಜಾಗಕ್ಕೆ ಹಾಕಿದ್ದೀರಿ. ಬೀದರ್‌ನ ಡಿ.ಸಿ.ಯನ್ನು ಕರೆದುಕೊಂಡು ಬಂದು ಇಲ್ಲಿಗೆ ಹಾಕಿ, ಇನ್ನೊಬ್ಬ ಎಸ್.ಪಿ.ಯನ್ನು ಕರೆದುಕೊಂಡು ಅಲ್ಲಿ ಹಾಕಿ, ಮತ್ತೆ ಅದೇ ಜಾಗಕ್ಕೆ ವಾಪಸ್ಸು ಕಳುಹಿಸಿದ್ದಿರಲ್ಲಾ, ಇದನ್ನು ಯಾವ ರೀತಿಯ administration ಎಂದು ಕರೆಯಬೇಕೆಂಬುದು ನನಗೆ ಗೊತ್ತಾಗುವುದಿಲ್ಲ. ಕರ್ನಾಟಕದ ಇತಿಹಾಸದಲ್ಲಿ ಈ ರೀತಿಯಾಗಿ ಒಬ್ಬ ಮುಖ್ಯಮಂತ್ರಿಯವರು ನಮ್ಮ ಆಂತರಿಕ ವ್ಯವಹಾರ, ನಮ್ಮ ಪಕ್ಷದ್ದು, ನಮ್ಮ ಸರ್ಕಾರದ್ದು ಎಂದು ಹೇಳಿಕೊಳ್ಳಬಹುದು. ಅದು ರಾಜ್ಯದ ಜನತೆಯ ಮೇಲೆ, ರಾಜ್ಯದ ಅಭಿವೃದ್ಧಿಯ ಮೇಲೆ ಯಾವ ರೀತಿಯಾದ ಕೆಟ್ಟ ಪರಿಣಾಮವಾಗಿದೆಯೆಂಬ ಬಗ್ಗೆ ಇವತ್ತು ರಾಜ್ಯದ ಜನರು ಚರ್ಚೆ ಮಾಡುತ್ತಿದ್ದಾರೆ. ಇವತ್ತು ಇದು ನಮ್ಮ ಮುಂದೆ ಇರುವ ಪ್ರಶ್ನೆ. ಈ ರೀತಿ ನಿಮಗೂ ಅನುಭವವಿರುವ ಮಟ್ಟಿಗೆ ಈ ರೀತಿ ಆಗಿರುವಂಥದ್ದನ್ನು ನಾನು ಯಾವ ಕಾಲದಲ್ಲೂ ನೋಡಿಲ್ಲ. ಈ ರೀತಿ ಆದಾಗ ಯಾವ ಎಸ್.ಪಿ, ಯಾವ ಡಿ.ಸಿ.ಗಳು ಧೈರ್ಯವಾಗಿ ಕೆಲಸ ಮಾಡುವುದಕ್ಕೆ ಹೋಗುತ್ತಾರೆ? ಯಾವ ತಹಶೀಲ್ದಾರರು ಮಾಡುತ್ತಾರೆ? ಸಿರಗುಪ್ಪದ ತಹಶೀಲ್ದಾರರು ಎಂ.ಎಲ್.ಎ. ಹೇಳಿದ ತಕ್ಷಣವೇ notice ಕೊಟ್ಟು ಬಿಟ್ಟರು. ಜಮೀನು register ಆದರೂ ಪರವಾಗಿಲ್ಲ cancel ಮಾಡಿಯೆಂದು ಹೇಳಿದರು. ನೀವು ಸ್ಥಳಾಂತರ ಮಾಡುವುದಕ್ಕೆ ಜಮೀನು ತೆಗೆದುಕೊಂಡು ಎಂ.ಎಲ್.ಎ. pressure ಹಾಕಿದರೆಂಬ ಕಾರಣಕ್ಕೋಸ್ಕರ ಅದನ್ನು cancel ಮಾಡುವುದಕ್ಕೆ ತಹಶೀಲ್ದಾರರು notice ಕೊಡುತ್ತಾರೆ. ಇಷ್ಟೊಂದು discriminate ಆಗಿರುವಂಥದ್ದನ್ನು ನಾನು ಯಾವಾಗಲೂ ನೋಡಿರಲಿಲ್ಲ. ಇದು ಒಂದು ನಿದರ್ಶನವನ್ನು ಹೇಳಿದ್ದೇನೆ. ಈ ರೀತಿಯಾಗಿ ರಾಜ್ಯದ ಅನೇಕ ಭಾಗಗಳಲ್ಲಿ ನಡೆದಿದೆ. ಮಾನ್ಯ ಸದಸ್ಯರುಗಳು ಮಾತನಾಡುವಾಗ ಅವರವರ ಭಾಗಗಳಲ್ಲಿ ಆಗಿರುವಂಥದ್ದನ್ನು ಪ್ರಸ್ತಾಪ ಮಾಡುತ್ತಾರೆ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಜಿಲ್ಲೆಗೆ ಪ್ರತ್ಯೇಕ ಕಾನೂನನ್ನು ರಚನೆ ಮಾಡಬೇಕಾಗುತ್ತದೆ, ಏಕೆಂದರೆ ಈ ಕಾನೂನು ಆ ಜಿಲ್ಲೆಗೆ apply ಆಗುವುದಿಲ್ಲ. ಅಲ್ಲಿರುವಂಥ ಸಚಿವರು, ಅಲ್ಲಿರುವಂಥ ಸರ್ಕಾರವೇ ಪ್ರತ್ಯೇಕವಾಗಿದೆ. ಅವರು ಏನು ಹೇಳುತ್ತಾರೋ ಅದನ್ನೇ implement ಮಾಡಬೇಕಾಗುತ್ತದೆ.

ಅಧ್ಯಕ್ಷರು : Please ವಿಷಯಾಂತರವಾಗುವುದು ಬೇಡ.

ಶ್ರೀ ಸಿದ್ದರಾಮಯ್ಯ : ಮಾನ್ಯ ಬಿ.ಸಿ.ಪಾಟೀಲ್‌ರವರು ಹೇಳಿದಂತೆ ಅಲ್ಲಿ ಕಾನೂನೇ ಇಲ್ಲ. There is no rule of law at all. There is no progress at all. ನಾವು ಇನ್ನೊಂದು ವಿಚಾರವನ್ನು ಬಹಳ ನೋವಿನಿಂದ ಹೇಳಬೇಕಾಗಿರುವಂಥದ್ದು ಏನೆಂದರೆ ಮಾನ್ಯ ಮುಖ್ಯಮಂತ್ರಿಯವರು ಬಳ್ಳಾರಿ ಜಿಲ್ಲೆಗೆ ಹೋಗಿದ್ದಾಗ receive ಮಾಡಿಕೊಳ್ಳುವುದಕ್ಕೆ ಅಲ್ಲಿನ ಡಿ.ಸಿ.ಯವರೇ ಪತ್ತೆ ಇರುವುದಿಲ್ಲ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ : ಭಯ ಏನೋ.. ..

ಶ್ರೀ ಸಿದ್ಧರಾಮಯ್ಯ : ಭಯ ಏನು ಅಲ್ಲ, ಇವರ ಬಗ್ಗೆ ಹೆದರಿಕೆ, ಭಯವೇ ಹೋಗಿ ಬಿಟ್ಟಿದೆ. ಬಳ್ಳಾರಿ ಜಿಲ್ಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರದು ಏನು ನಡೆಯುವುದಿಲ್ಲವೆಂದು ತಿಳಿದುಕೊಂಡು ಬಿಟ್ಟಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಬಳ್ಳಾರಿಗೆ ಹೋದಾಗ ಡಿ.ಸಿ.ಯವರು ಏಕೆ ಹೋಗಬೇಕು? ಮಾನ್ಯ ಯಡಿಯೂರಪ್ಪನವರದು ಏನು ನಡೆಯುವುದಿಲ್ಲವಲ್ಲಾ, ಹಾಗಾಗಿ ಡಿ.ಸಿ.ಯವರು ಹೋಗಲಿಲ್ಲ. ಈ ರೀತಿಯಾಗಿರುವಂಥದ್ದನ್ನು ತಾವು ಯಾರಾದರೂ ನೋಡಿದ್ದಿರಾ? ನಾನಂತೂ ನೋಡಿಲ್ಲ. ಆ ರೀತಿ ಆಗಿರುವುದಕ್ಕೆ ಅವರ ಮೇಲೆ ಮಾನ್ಯ ಮುಖ್ಯಮಂತ್ರಿ ಯವರು ಏನಾದರೂ disciplinary action ಅನ್ನು ತೆಗೆದುಕೊಂಡಿದ್ದಾರ? Protocol demands, District ಆಡಳಿತ ಮಾನ್ಯ ಮುಖ್ಯಮಂತ್ರಿಯವರನ್ನು receive ಮಾಡಿಕೊಳ್ಳಬೇಕು. ಅವರು ಯಾರೇ ಮುಖ್ಯಮಂತ್ರಿಗಳಾಗಿರಲಿ, ಅವರಾಗಲಿ, ನಾವಾಗಲಿ, ಇನ್ಯಾರಾದರೂ ಆಗಿರಲಿ, ಮುಖ್ಯಮಂತ್ರಿಯ ಸ್ಥಾನಕ್ಕೆ ಅಗೌರವವಾಗಬಾರದು. ಇಲ್ಲಿ ಅಧಿಕಾರ ಬರುತ್ತದೆ, ಹೋಗುತ್ತದೆ, ಅಧಿಕಾರ ಶಾಶ್ವತವಲ್ಲ. ಕೇವಲ ಅಧಿಕಾರದಲ್ಲಿ ಉಳಿಯುವುದಕ್ಕೋಸ್ಕರ, ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ, ನಮ್ಮ ಕುರ್ಚಿಗೆ ಅಗೌರವವಾದರೂ ಪರವಾಗಿಲ್ಲ. ನಾವು ಹೀಗೆ ನಡೆದುಕೊಳ್ಳುವುದು ಎನ್ನುವುದಾದರೆ ಅದು ಈ ರಾಜ್ಯದ ದೌರ್ಭಾಗ್ಯ, ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳೆಲ್ಲಾ ನಾಶವಾಗಿ ಬಿಡುತ್ತವೆ. ಇದು ಒಂದು ವಿಷಯವಾಯಿತು. ಈ ಜಗಳದಲ್ಲಿ ಮಾನ್ಯ ಮುಖ್ಯಮಂತ್ರಿ ಯವರು ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಹೆಲಿಕ್ಯಾಪ್ಟರ್‌ನಲ್ಲಿ ಹೋದರು. ಅಲ್ಲಿಗೆ ಹೋಗಿ ಪೂಜೆ ಮಾಡಿ ಬರುವುದು. ಇನ್ನೊಂದು ಕಡೆ ಮಾನ್ಯ ಕರುಣಾಕರ ರೆಡ್ಡಿಯವರೊಂದು ಕಡೆ ಪೂಜೆ ಮಾಡುವುದಕ್ಕೆ

ಹೋಗುವುದು. ನಾವು ಒಂದು ಕಡೆ, ನೀವು ಒಂದು ಕಡೆ ಎಂದು ಪೂಜೆ ಮಾಡುವುದಕ್ಕೆ competition ಮಾಡುವುದು. ನೀವು ಇಲ್ಲವೆಂದು ಹೇಳಿದರೂ ಇಡೀ ರಾಜ್ಯದ ಜನರಿಗೆ ಎಲ್ಲಾ ಗೊತ್ತಾಗಿದೆ. ಅದನ್ನೆಲ್ಲಾ ಜನ ಮರೆತು ಬಿಟ್ಟಿದ್ದಾರೆಯೇ? ನೀವು ಜಗಳವಾಡಿರುವುದು, ಬೈದಾಡಿರುವುದನ್ನೆಲ್ಲಾ ಜನರು ಮರೆತು ಬಿಟ್ಟಿದ್ದಾರ? ಅದನ್ನು ಏನು ಮರೆಯುವ ಹಾಗೆ ಇಲ್ಲ, ಅದೆಲ್ಲಾ record ಆಗಿಬಿಟ್ಟಿದೆ. It is on record.

ಶ್ರೀ ಜಿ.ಕರುಣಾಕರ ರೆಡ್ಡಿ : 1947ನೇ ಇಸವಿಯಿಂದಲೇ record ಆಗಿದೆ.

ಶ್ರೀ ಸಿದ್ದರಾಮಯ್ಯ : ಹೌದು, ಎಲ್ಲಾನೂ ರೆಕಾರ್ಡ್ ಇದೆ. ಈಗ ನಿಮ್ಮದೂ ರೆಕಾರ್ಡ್ ಇದೆ, ಅಲ್ಲಿ ಅವರದು ರೆಕಾರ್ಡ್ ಇದೆ. ಇವತ್ತು ಆ ರೀತಿ ಅವರು ಹೋಗಿ ಪೂಜೆ ಮಾಡುವುದು, ಇವರು ಮಾಡುವುದು. ನಮಗೆ ಬಳ್ಳಾರಿ ಗಣಿಗಾರಿಕೆ ಮಾಡುವವರು ವಂತಿಕೆಯನ್ನು ಕೊಡುತ್ತಾರೆ ಅದರಿಂದ ನಾವು ಮಾಡುತ್ತೇವೆ. ಇವರು ಜನಗಳೆಲ್ಲಾ ವಂತಿಕೆಯನ್ನು ಕೊಟ್ಟಿದ್ದಾರೆ, ಅದಕ್ಕೆ ನಾವು ಮಾಡುತ್ತೇವೆಂದು ಹೇಳಿ, ಎಲ್ಲಾ ಕಡೆಗಳಲ್ಲೂ ಗುದ್ದಲಿ ಪೂಜೆಯನ್ನು ಮಾಡಿ ಬಂದಿದ್ದಾರೆ. ಬಹುಶಃ ನನಗೆ ಗೊತ್ತಿರುವ ಹಾಗೆ ಇವತ್ತಿನವರೆಗೂ ಎಲ್ಲೂ ಒಂದು ಮನೆಯನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿಲ್ಲ. ಅದು ನೀವು ಪೂಜೆ ಮಾಡಿರುವ ಜಾಗದಲ್ಲೂ ಇಲ್ಲ, ಇವರು ಪೂಜೆ ಮಾಡಿರುವ ಜಾಗದಲ್ಲೂ ಇವತ್ತಿನವರೆಗೂ . ಮನೆಯನ್ನು ಕಟ್ಟಿಲ್ಲ. ಇವತ್ತಿನವರೆಗೂ site formation ಆಗಿ ಅವರಿಗೆ ಹಕ್ಕುಪತ್ರವನ್ನು ಕೊಟ್ಟು, ಯಾರು ಮನೆಯನ್ನು ಕಟ್ಟುತ್ತಾರೋ ಅವರಿಗೆ agency ಗೊತ್ತು ಮಾಡುವಂಥದ್ದು. ಇವತ್ತು ಇಡೀ ಸದನ ಈ ರಾಜ್ಯದ ಜನತೆಗೆ ಋಣಿಯಾಗಿರಬೇಕು. ನಾನು ಎಲ್ಲಾ ಮಾನ್ಯ ಸದಸ್ಯರುಗಳ ಪರವಾಗಿ ಮತ್ತು ಸದನದ ಪರವಾಗಿ ಹೇಳುತ್ತೇನೆ. ಇವತ್ತು ಭೀಕರವಾದ ಪ್ರವಾಹಕ್ಕೆ ತುತ್ತಾಗಿ ಕಷ್ಟಕ್ಕೆ ಸಿಲುಕಿದಂಥ ಜನರಿಗೆ ಜನರು ಬಹಳ ಉದಾರತೆಯಿಂದ ದೇಣಿಗೆಯನ್ನು ಕೊಟ್ಟರು. ಪದಾರ್ಥಗಳ ರೂಪದಲ್ಲಿ, ಹಣದ ರೂಪದಲ್ಲಿ ಕೊಟ್ಟರು. ಎಷ್ಟು ಕೊಟ್ಟಿದ್ದಾರೆಂಬ ಲೆಕ್ಕ ಯಾರಿಗೂ ಗೊತ್ತಿಲ್ಲ. ಇವತ್ತು ಜನರು ಉದಾರವಾಗಿ ಕೊಟ್ಟಿದ್ದಾರೆಂದು ನಾವು ಹೇಳಿದೆವು, ಅವರು ಸಹಾಯಕ್ಕೆ ಬಂದಿದ್ದಾರೆ, ನೆರವಿಗೆ ಬಂದಿದ್ದಾರೆ. ಅವರಿಗೆ ನಾವು ಇವತ್ತು ಎಷ್ಟೇ ಕೃತಜ್ಞತೆಗಳನ್ನು ಸಲ್ಲಿಸಿದರೂ ಅದು ಕಡಿಮೆಯೇ ಆಗುತ್ತದೆ. ನಾನು ಹಿಂದೆ

ಪ್ರವಾಹ ಬಂದಿದ್ದಾಗ, ಬರ ಬಂದಿದ್ದಾಗ ಜನಗಳ ಹತ್ತಿರ ದೇಣಿಗೆಯನ್ನು ಕೇಳುವುದಕ್ಕೆ ಹೋಗಿದ್ದೆವು. ಆದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರು ಉದಾರವಾಗಿ ದೇಣಿಗೆ ಕೊಟ್ಟಿರುವಂಥ ನಿದರ್ಶನವಿರಲಿಲ್ಲ. ಇದಕ್ಕೆ ಕಾರಣ 15 ಜಿಲ್ಲೆಗಳಲ್ಲಿ ಸುಮಾರು ಎರಡು ಕೋಟಿಗೂ ಹೆಚ್ಚು ಜನರು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ ಎಂಬುದು. ಜನರು ಬಹಳ ಉದಾರವಾಗಿ ದೇಣಿಗೆಯನ್ನು ಕೊಟ್ಟರು. ಅದು ಬೆಂಗಳೂರಿನಲ್ಲಿ, ಬೇರೆ ಬೇರೆ ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ, ಅಪಾರವಾಗಿ ದೇಣಿಗೆಯನ್ನು ಕೊಟ್ಟರು. ನಾನು ಅವರೆಲ್ಲರಿಗೂ ನನ್ನ ಪರವಾಗಿ ಮತ್ತು ಸದನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಸಂಘ ಸಂಸ್ಥೆಗಳು ಕೂಡ ದೇಣಿಗೆಯನ್ನು ಕೊಟ್ಟಿವೆ, ಮಠಗಳು ಕೂಡ ಕೊಟ್ಟಿವೆ, ಸರ್ಕಾರಿ ನೌಕರರು ತಮ್ಮ ಸಂಬಳವನ್ನು ಕೊಟ್ಟಿದ್ದಾರೆ, ಬೋರ್ಡ್, ಕಾರ್ಪೊರೇಷನ್‌ಗಳಿಂದ ತೆಗೆದುಕೊಂಡಿದ್ದಾರೆ. ಬಟ್ಟೆಬರೆ, ಪದಾರ್ಥಗಳು ಎಲ್ಲವನ್ನೂ ಕೊಟ್ಟಿದ್ದಾರೆ. ಆದರೆ ಎಷ್ಟು amount ಬಂದಿದೆ ಎಂದು ಅವರು ಹೇಳುವುದೇ ಇಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಸುಮಾರು 800 ಕೋಟಿ ರೂಪಾಯಿಗಳಿಗೂ ಹೆಚ್ಚು ಬಂದಿರಬೇಕು ಎಂದು ಅನ್ನಿಸುತ್ತದೆ. ಏಕೆಂದರೆ, ಸರ್ಕಾರಿ ನೌಕರರೇ ತಮ್ಮ ಸಂಬಳದಿಂದ ಸುಮಾರು 200 ಕೋಟಿ ರೂಪಾಯಿಗಳಿಗೂ ಹೆಚ್ಚು ಕೊಟ್ಟಿದ್ದಾರೆ, ಬಿ.ಡಿ.ಎ. 50 ಕೋಟಿ ರೂಪಾಯಿಗಳನ್ನು ಕೊಟ್ಟಿದೆ, ಕೆ.ಪಿ.ಟಿ.ಸಿ.ಎಲ್.50 ಕೋಟಿ ರೂಪಾಯಿಗಳನ್ನು ಕೊಟ್ಟಿದೆ, ಇದೇ ರೀತಿ ಇತರ ಕಂಪನಿಗಳವರೂ ಕೊಟ್ಟಿದ್ದಾರೆ. ಆದರೆ ಇವರು 60 ಕೋಟಿ ರೂಪಾಯಿ cash ಬಂದಿದೆ ಎಂದು ಹೇಳಿದ್ದಾರೆ. ಅದಕ್ಕಾಗಿ ನಾನು ಮುಖ್ಯಮಂತ್ರಿಗಳಿಗೆ demand ಮಾಡುತ್ತೇನೆ, ಸಾರ್ವಜನಿಕವಾಗಿ ಕೊಟ್ಟಿರತಕ್ಕಂಥ ವಂತಿಗೆಗಳು, ಅದು kind ಇರಲಿ, cash ಇರಲಿ, ಯಾರ್‍ಯಾರು ಎಷ್ಟೆಷ್ಟು ಕೊಟ್ಟಿದ್ದಾರೆ ಎನ್ನುವುದನ್ನು ಸದನದ ಮುಂದೆ ಇಡಬೇಕು.

ಶ್ರೀ ಎಸ್.ಸುರೇಶ್ ಕುಮಾರ್ : ನಿಮ್ಮ ಅನುಮಾನ ಪರಿಹಾರಕ್ಕಾಗಿ ಹೇಳುತ್ತೇನೆ. I have to put the record straight. ನೀವು ಕೇಳುತ್ತಿರುವುದನ್ನೆಲ್ಲ ಮುಖ್ಯಮಂತ್ರಿಗಳು ಉತ್ತರದಲ್ಲಿ ಹೇಳುತ್ತಾರೆ. ಸರ್ಕಾರದ ಒಂದು website ನಲ್ಲಿ ನಾವು ಪ್ರತಿ ದಿವಸ ಎಷ್ಟೆಷ್ಟು ಹಣ ಬಂದಿದೆ, ಯಾರ್‍ಯಾರ ಮುಖಾಂತರ ಬಂದಿದೆ ಎಂದು update ಮಾಡಿದ್ದೇವೆ. we are transparent to that extent. ದಯವಿಟ್ಟು ನೀವು website ನೋಡಿದರೆ

ಗೊತ್ತಾಗುತ್ತದೆ. ಯಾರ್ಯಾರಿಂದ, ಯಾವ ಯಾವ ಬಾಬ್ತಿನಿಂದ ಎಷ್ಟೆಷ್ಟು ಹಣ ಬಂದಿದೆ ಎನ್ನುವುದನ್ನು ಅದರಲ್ಲಿ ಹಾಕಿದ್ದೇವೆ.

ಶ್ರೀ ಸಿದ್ದರಾಮಯ್ಯ : Website ನಲ್ಲಿ ಹಾಕುವುದಲ್ಲ, ಈ ಸದನದಲ್ಲಿ ನೀಡಿ ಎಂದು ಹೇಳುತ್ತಿದ್ದೇನೆ. ಈ ಬಗ್ಗೆ ನಾನು Revenue Department ನಿಂದ information ಕೇಳಿದ್ದೆ. ಅದನ್ನು ಅವರು ಕೊಟ್ಟಿದ್ದಾರೆ. ಅದರಲ್ಲಿ ಅವರು ಏನು ಹೇಳಿದ್ದಾರೆ ಎಂದರೆ, ಅದು Finance Department, ಮುಖ್ಯಮಂತ್ರಿಗಳ ನಿಧಿಯಲ್ಲಿದೆ, ಅಲ್ಲಿ ಕೇಳಿ ಎಂದು ಹೇಳಿದ್ದಾರೆ. ತಾವು ಹೇಳುತ್ತಿರುವುದು ಅವರಿಗೆ ಗೊತ್ತಿರಲಿಲ್ಲವೇ? Website ನಲ್ಲಿ ನೋಡಿ ಅವರು ಉತ್ತರವನ್ನು ಕೊಡಬಹುದಾಗಿತ್ತಲ್ಲವೇ? ಅವರು Website ಅನ್ನು ನೋಡಿಲ್ಲವೇ? Website ಅನ್ನು ಅವರೇ ನೋಡದಿದ್ದ ಮೇಲೆ, ನಾವೇನು ನೋಡೋಣ? ನಮಗೆ Website ಅನ್ನು ನೋಡುವುದಕ್ಕೇ ಬರುವುದಿಲ್ಲ. ಸಂಬಂಧಪಟ್ಟ Revenue Department ನವರೇ Website ನೋಡಿ ಉತ್ತರ ಕೊಡುವುದಕ್ಕೆ ಆಗದಿದ್ದ ಮೇಲೆ ನಾವು ನೋಡುವುದಕ್ಕೆ ಆಗುತ್ತದೇನು? ನಮಗೆ Website ಗೊತ್ತಿಲ್ಲ, ಅದನ್ನು ನೋಡುವುದಕ್ಕೂ ಬರುವುದಿಲ್ಲ. ನನ್ನ ಮಾತನ್ನು ಕೇಳಿ ಈಶ್ವರಪ್ಪನವರು ನಗುತ್ತಿದ್ದಾರೆ, ಈಶ್ವರಪ್ಪನವರೇ ನಿಮಗೆ Website ನೋಡಲು ಬರಬಹುದೇನೋ, ನನಗೆ ಬರುವುದಿಲ್ಲ, you are better than me. ನಾನು Website ಅನ್ನು ನೋಡುವುದಕ್ಕೂ ಹೋಗುವುದಿಲ್ಲ. ಗೊತ್ತಾದರಲ್ಲವೇ ನೋಡುವುದು? ಮೊಬೈಲ್‌ನಲ್ಲಿಯೇ ಹೆಸರನ್ನು ಸರಿಯಾಗಿ Store ಮಾಡಿಕೊಳ್ಳಲು ನನಗೆ ಬರುವುದಿಲ್ಲ. ದುಡ್ಡು ಎಷ್ಟು ಬಂದಿದೆ ಎಂದು ಉತ್ತರ ಕೊಡಿ ಎಂದು Revenue Department ನವರನ್ನು ಕೇಳಿದರೆ, ಅದನ್ನು Chief Minister office ನಲ್ಲಿ ಕೇಳಬೇಕು ಮತ್ತು Finance Department ನವರನ್ನು ಕೇಳಬೇಕು ಎಂದು ಉತ್ತರ ಕೊಟ್ಟಿದ್ದಾರೆ. ಅದಕ್ಕಾಗಿಯೇ, ಅವರಿಗೆ ಗೊತ್ತಿಲ್ಲ ಎಂದು ನಾನು ಹೇಳಿದ್ದು. ಆದ್ದರಿಂದ I demand, ಪ್ರವಾಹ ಪರಿಹಾರಕ್ಕೆ ಸಂಬಂಧಪಟ್ಟಂತೆ ಯಾರ್ಯಾರು ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ, ಅದು ಖಾಸಗಿಯವರು ಇರಬಹುದು, ಸರ್ಕಾರಿ ನೌಕರರಿರಬಹುದು, ಕಂಪನಿಗಳಿರಬಹುದು, ಬೋರ್ಡ್, ಕಾರ್ಪೊರೇಷನ್‌ಗಳಿರಬಹುದು, ಒಟ್ಟು ಎಷ್ಟು ಬಂದಿದೆ ಎನ್ನುವುದನ್ನು ಸದನದ ಮುಂದೆ ಇಡುವುದು ಬಹಳ ಒಳ್ಳೆಯದು. ಅದರಿಂದ ಎಲ್ಲ ಮಾನ್ಯ

ಸದಸ್ಯರಿಗೆ, ಈ ರಾಜ್ಯದ ಜನತೆ ಎಷ್ಟು ಉದಾರವಾಗಿ ದೇಣಿಗೆ ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗಲು ಸಾಧ್ಯವಾಗುತ್ತದೆ ಮತ್ತು ಅವರಿಗೆ ಕೃತಜ್ಞತೆಗಳನ್ನು ಕೂಡ ಹೇಳಲು ಸಾಧ್ಯವಾಗುತ್ತದೆ. ಇವತ್ತಿನವರೆಗೂ ಇವರಿಗೆ ಎಲ್ಲರಿಗೂ ಪರಿಹಾರಗಳನ್ನು ಕೊಡಲು ಸಾಧ್ಯವಾಗಿಲ್ಲ. CRF norms ನಲ್ಲಿ ಯಾವ್ಯಾವುದಕ್ಕೆ ಎಷ್ಟೆಷ್ಟು ಪರಿಹಾರ ಕೊಡಬೇಕು ಎಂದು ಹೇಳಿದ್ದಾರೆ. ಅದರ ಪ್ರಕಾರ ಇವತ್ತಿನವರೆಗೂ ಪರಿಹಾರ ಕೊಡುವುದಕ್ಕೆ ಆಗಿಲ್ಲ. ಸತ್ತವರಿಗೆ ಒಂದು ಲಕ್ಷ ರೂಪಾಯಿಗಳ ex-gratia amount ಅನ್ನು ಕೊಟ್ಟಿದ್ದೀರಿ. ಪ್ರಧಾನ ಮಂತ್ರಿಗಳು ಬಂದಿದ್ದಾಗ, ಕೇಂದ್ರ ಸರ್ಕಾರದಿಂದ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಘೋಷಣೆ ಮಾಡಿದ್ದರು. ಅದು ಬಂತೋ, ಇಲ್ಲವೋ ಎನ್ನುವುದನ್ನೇನನ್ನೂ ಹೇಳಿಲ್ಲ. CRF normsನ revised estimate ನಲ್ಲಿ ಗಾಯಗೊಂಡವರಿಗೆ ಎಷ್ಟು ಕೊಡಬೇಕು ಎನ್ನುವುದೆಲ್ಲ ಇದೆ. 75% ಗಿಂತ ಹೆಚ್ಚು ಊನವಾದವರಿಗೆ 50 ಸಾವಿರ ರೂಪಾಯಿಗಳನ್ನು ಕೊಡಬೇಕು, between 40% to 75% ಇದ್ದರೆ, ಅವರಿಗೆ 35 ಸಾವಿರ ರೂಪಾಯಿಗಳನ್ನು ಕೊಡಬೇಕು, ಗಾಯಗೊಂಡು ಒಂದು ವಾರ ಆಸ್ಪತ್ರೆಯಲ್ಲಿದ್ದರೆ ಏಳೂವರೆ ಸಾವಿರ ರೂಪಾಯಿಗಳನ್ನು ಕೊಡಬೇಕು, ವಯಸ್ಸಾದವರಿಗೆ 20 ರೂಪಾಯಿ ಕೊಡಬೇಕು, ಮಕ್ಕಳಿಗೆ 15 ರೂಪಾಯಿ ಕೊಡಬೇಕು ಎನ್ನುವುದೆಲ್ಲ ಇದೆ. ಅದರ ಪ್ರಕಾರ ಕೊಟ್ಟಿದ್ದಾರೋ, ಇಲ್ಲವೋ ಎನ್ನುವುದನ್ನು ಕೂಡ ಹೇಳಬೇಕು. Assistance to small and marginal farmers: De-silting of agricultural land- ಅದಕ್ಕೆ ಒಂದು ಹೆಕ್ಟೇರ್‌ಗೆ ಆರು ಸಾವಿರ ರೂಪಾಯಿಗಳನ್ನು ಕೊಡಬೇಕು. ಇದನ್ನು ಕೊಟ್ಟಿದ್ದಾರೋ, ಇಲ್ಲವೋ ಎನ್ನುವುದನ್ನು ಹೇಳಬೇಕು. ನನಗೆ ಗೊತ್ತಿರುವ ಮಟ್ಟಿಗೆ, 2 ತಿಂಗಳು 20 ದಿನಗಳಾಗುತ್ತಾ ಬಂದರೂ ಇವತ್ತಿನವರೆಗೆ ಇದನ್ನು ಕೊಟ್ಟಿಲ್ಲ. Fish pond ಗಳನ್ನು restore ಮಾಡಲಿಕ್ಕೆ, de-silt ಮಾಡಲಿಕ್ಕೆ ಒಂದು ಹೆಕ್ಟೇರ್ ಗೆ ಆರು ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ಇದೆ. Removal of debris - ಅದಕ್ಕೆ ಆರು ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ಇದೆ. Loss of substantial portion of land caused by land slide, change of force of rivers – ಇದಕ್ಕೆ ಒಂದು ಹೆಕ್ಟೇರ್ ಗೆ 15 ಸಾವಿರ ರೂಪಾಯಿ ಕೊಡಬೇಕು ಎಂದು ಇದೆ. ಇನ್ನು

agricultural crops ಗೆ ನೀಡುವ ಪರಿಹಾರದ ಬಗ್ಗೆ ಹೇಳುವುದಾದರೆ, memorandum ಕೊಡುವಾಗ ಮಾನ್ಯ ಮುಖ್ಯಮಂತ್ರಿಗಳೇ ಇದನ್ನು double ಮಾಡಬೇಕು ಎಂದು ಹೇಳಿದ್ದಾರೆ. ಆದರೆ ಇವರು ಕೊಡುವಾಗ ಮಾತ್ರ ಅಷ್ಟನ್ನೇ ಕೊಟ್ಟಿದ್ದಾರೆ. ತಮ್ಮಲ್ಲಿ ನಾನು ಮನವಿ ಮಾಡುವುದು ಮತ್ತು ಸರ್ಕಾರದಲ್ಲಿ ಒತ್ತಾಯ ಮಾಡುವುದೇನೆಂದರೆ, ಈ norms ಪ್ರಕಾರವೇ ಕೊಡಬೇಕು ಎಂದು ಎಲ್ಲಿದೆ. ನಿಮ್ಮ ಕೈಯಿಂದಲೇ ಹೆಚ್ಚಾಗಿ ಕೊಡಿ. Why not from your pocket? ರೈತರಿಗೆ ವಾಸ್ತವಿಕ ನಷ್ಟ ಎಷ್ಟಾಗಿದೆ ಅದರ ಹತ್ತಿರಕ್ಕೆ ಬರುವಂತೆ ಪರಿಹಾರ ಕೊಡಿ. Rain fed area ಗಳಲ್ಲಿ ಒಂದು ಹೆಕ್ಟೇರ್‌ಗೆ ಎರಡು ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು norms ಇದೆ. ಆದರೆ ನೀವು ಅದಕ್ಕೆ ನಾಲ್ಕು ಅಥವಾ ಐದು ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ನಿಮ್ಮ memorandum ನಲ್ಲಿ ಹೇಳಿದ್ದೀರಿ. ಅದರಂತೆಯೇ ಐದು ಸಾವಿರ ರೂಪಾಯಿಗಳನ್ನು ಕೊಡಿ. Then why are you restricting to one hectare? ಎರಡು ಹೆಕ್ಟೇರ್‌ಗೆ ಕೊಡಿ. ನಿಮ್ಮ ಕೈಯಿಂದಲೇ ಕೊಡಿ. ಹಾಗೆ ಕೊಡಬೇಡಿ ಎಂದು ಕೇಂದ್ರ ಸರ್ಕಾರದವರು ಹೇಳಿದ್ದಾರೆಯೇ? ನಿಮ್ಮ ಕೈಯಿಂದ ಏಕೆ ಕೊಟ್ಟಿರಿ ಎಂದು ಕೇಳುತ್ತಾರೆಯೇ? ಇದರ ಬಗ್ಗೆ ಏನೂ ಮಾಡಿಲ್ಲ. ನೀರಾವರಿ ಪ್ರದೇಶಕ್ಕೆ ನಾಲ್ಕು ಸಾವಿರ ರೂಪಾಯಿ, ಕೆರೆ ನೀರಿನಿಂದ ಬೆಳೆಯುವ ಬೆಳೆಗಳಿಗೆ ಆರು ಸಾವಿರ ರೂಪಾಯಿ, ಮಲ್ಬರಿ ಇದ್ದರೆ ಎರಡು ಸಾವಿರ ರೂಪಾಯಿ ಕೊಡಬೇಕು ಎಂದೆಲ್ಲಾ ಇದೆ. ಈ ರೀತಿ ಎಲ್ಲೂ ಕೂಡ ಕೊಟ್ಟ ಹಾಗೆ ಕಾಣಿಸುವುದಿಲ್ಲ. ಅದೇ ರೀತಿ ನೆರೆಯಲ್ಲಿ ಅನೇಕ ಪ್ರಾಣಿಗಳು ಸತ್ತಿವೆ. ನಾನು ಅನೇಕ ಕಡೆಗಳಿಗೆ ಹೋಗಿದ್ದೆ. ಹಸುಗಳು, ದನಗಳು, ಕುರಿಗಳು, ಮೇಕೆಗಳು, ದನಗಳು ಹೀಗೆ ಎಲ್ಲವೂ ಕೊಚ್ಚಿಕೊಂಡು ಹೋಗಿವೆ. ಅವುಗಳಿಗೆ ಪರಿಹಾರ ಕೇಳಲು ಹೋದರೆ post mortem report ಕೇಳುತ್ತಾರೆ. ಹೊಳೆಯಲ್ಲಿ ಕೊಚ್ಚಿಕೊಂಡು ಹೋದವುಗಳಿಗೆ post mortem report ಅನ್ನು ಎಲ್ಲಿಂದ ತಂದು ಕೊಡುತ್ತಾರೆ? ನೀರಿನಲ್ಲಿ ಕೊಚ್ಚಿಕೊಂಡು ಹೋದವುಗಳಿಗೆ ಡಾಕ್ಟರ್ post mortem report ಹೇಗೆ ಕೊಡುತ್ತಾರೆ? ಬಹಳ ಜನರು ಕುರಿಗಳನ್ನು ತೆಗೆದುಕೊಂಡು ಹೋಗಿ ಕಾಡಿನಲ್ಲಿ ಇರುತ್ತಾರೆ, ನದಿ ದಡದಲ್ಲಿ ಇರುತ್ತಾರೆ, ಮಂದೆ ಎಂದು ಹಾಕಿಕೊಂಡು ಎಲ್ಲೋ ಕುಳಿತಿರುತ್ತಾರೆ.

ಕುರಿ ಸಾಕುವವರಿಗೆ, ಮೇಕೆ ಸಾಕುವವರಿಗೆ ಅದೇ ಕಸುಬು, ಅದೇ ಬದುಕು. ಕೆಲವರು ಅವರ ಕುರಿಗಳನ್ನು ಹೊತ್ತುಕೊಂಡು ಹೋಗಿಬಿಟ್ಟಿದ್ದಾರೆ, ಕೆಲವು ಕುರಿಗಳು ರೋಗ ಬಂದು ಸತ್ತುಹೋಗಿವೆ. ಅವುಗಳ post mortem report ಕೊಡಿ ಎಂದರೆ ಕೊಡುವುದಿಲ್ಲ. ನೀವು ಆ ಊರಿನಲ್ಲಿ ಆ ಜನರ ಮುಂದೆ ಅವುಗಳ ಮಹಜರು ಮಾಡಿ ಕುರಿಗಳು, ಮೇಕೆಗಳು ನಿಜವಾಗಿಯೂ ಸತ್ತುಹೋಗಿದ್ದರೆ, ಅವರಿಗೆ ಪರಿಹಾರ ಕೊಡಬೇಕು. ಬಹಳಷ್ಟು ಜನ ತಮ್ಮ ಕುರಿ ಸತ್ತಿವೆ, ಇದರ ಬಗ್ಗೆ ಯಾರೂ ಹೇಳುವವರಿಲ್ಲ, ಕೇಳುವವರಿಲ್ಲ, ತಹಶೀಲ್ದಾರ್‌ರವರಿಗೆ ಹೇಳಿದರೆ, ಅವುಗಳ dead body ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ, ತಮಗೆ ಪರಿಹಾರ ಕೊಡಿ ಎಂದು representation ಕೊಟ್ಟಿದ್ದಾರೆ. ಆದರೆ, ಆ ಜನರು ನದಿಯಲ್ಲಿ ಕೊಚ್ಚಿಹೋದ ಕುರಿಗಳ dead body ಗಳನ್ನು ಎಲ್ಲಿಂದ ತಂದುಕೊಡುವುದು? ಹೇಗೆ postmortem ಮಾಡುವುದು? ಅವರಿಗೆ ಪರಿಹಾರ ಕೊಡದೇ ಹೋದರೆ, is it not a great loss to them? You have to find out. ಹಾಗಾದರೆ, ಆ ಜನರಿಗೆ ಸಹಾಯ ಸಿಗುವುದು ಹೇಗೆ? ಆ ಜನರು ನಷ್ಟ ಅನುಭವಿಸಬೇಕೆ? Norms ಪ್ರಕಾರವೂ ಕೊಟ್ಟಿಲ್ಲ, norms ಗೆ comply ಆಗಬೇಕೆಂದೂ ಇಲ್ಲ. ಅದರಿಂದ ಆಚೆ ಹೋಗಿ ಕೊಡಬಹುದು. ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಇದರ ಪ್ರಕಾರ ಕೊಡಬೇಕೆಂದು norms ಮಾಡಿದ್ದಾರೆ. ಅದೂ ಕೂಡ 12th Finance Commission ನವರು ಮಾಡಿರುವ ಶಿಫಾರಸ್ಸಿನ ಆಧಾರದ ಮೇಲೆ ಮಾಡಿದ್ದಾರೆ. ಆದರೆ, ಇದನ್ನು ರಾಜ್ಯ ಸರ್ಕಾರ ಬದಲಾಯಿಸಿಕೊಳ್ಳಬಾರದೆಂದೇನೂ ಇಲ್ಲ. ಪ್ರವಾಹ ಬಂದ ತಕ್ಷಣವೇ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ, ಆಂಧ್ರ ಸರ್ಕಾರಕ್ಕೊಂದು ತರಹ ಕೊಡುತ್ತಾರೆ, ಕರ್ನಾಟಕಕ್ಕೆ ಒಂದು ತರಹ ಕೊಡುತ್ತಾರೆಂದು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಿದರು. ಮುಖ್ಯಮಂತ್ರಿಯವರು ಏನಾದರೂ ಹೇಳುವುದಕ್ಕಿಂತ ಮುಂಚಿತವಾಗಿ 11th Finance Commission Recommendation, 12th Finance Commission ನವರು CRF, NCCF ಅನ್ನು ಯಾವ್ಯಾವ ರಾಜ್ಯಗಳಿಗೆ ಯಾವ ತರಹ ನಿಗದಿ ಮಾಡಿದ್ದಾರೆ ಎನ್ನುವುದನ್ನು ತಿಳಿದುಕೊಂಡು statement ಕೊಡಬೇಕು. ಆದರೆ, ಆಂಧ್ರಕ್ಕೆ ಜಾಸ್ತಿ ಸಹಾಯ ಕೊಟ್ಟರು, ಕರ್ನಾಟಕಕ್ಕೆ ಕಡಿಮೆ ಕೊಟ್ಟರು

ಎನ್ನುವ ಸಂದೇಶ ರಾಜ್ಯದ ಜನರಿಗೆ ಹೋಗುತ್ತದೆ. It is in accordance with the recommendations of the 12th Finance Commission ಇವೆರಡೂ ವಾಜಪೇಯಿಯವರು ಪ್ರಧಾನಿಯಾಗಿದ್ದಾಗಲೇ, NDA ಸರ್ಕಾರವಿದ್ದಾಗಲೇ ಆಗಿರುವಂಥದ್ದು. ಆ ಶಿಫಾರಸ್ಸುಗಳಿಗೆ ಅನುಗುಣವಾಗಿ ಕೇಂದ್ರ ಸರ್ಕಾರದವರು NCCF, CRF ಕೊಡುತ್ತಾರೆ. CRF ನಲ್ಲಿ 75% ಕೇಂದ್ರ ಸರ್ಕಾರ, 25% ರಾಜ್ಯ ಸರ್ಕಾರ, NCCF fund depending upon the ಅಲ್ಲಿರುವಂಥ population, gravity of the situation ಇದನ್ನೆಲ್ಲ ನೋಡಿಕೊಂಡು 12th Finance Commission ನವರು ಒಂದೊಂದು ರಾಜ್ಯಕ್ಕೆ ಇಡೀ 5 ವರ್ಷಗಳಿಗೆ ಏನು recommendations ಮಾಡಿದ್ದಾರೆ ಅದನ್ನು ನೋಡಿಕೊಂಡು ತೀರ್ಮಾನ ಮಾಡುತ್ತಾರೆ. ಇದನ್ನು ಬಿಟ್ಟು ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡಿದೆ ಎಂದೇನು ಹೇಳಿದಿರಿ, ಅದು ಎರಡು ದಿವಸ ಅದೇ ಪೇಪರ್ ನಲ್ಲಿ ಬಂತು. ಪ್ರವಾಹ ಆದ ಕೂಡಲೇ ನಮ್ಮ ಪಕ್ಷದ ಅಧ್ಯಕ್ಷರಾದ ಶ್ರೀಮತಿ ಸೋನಿಯಾಗಾಂಧಿಯವರ ಹತ್ತಿರ, ಪ್ರಧಾನಿಯವರಾದ ಮನಮೋಹನ್ ಸಿಂಗ್ ರವರ ಹತ್ತಿರ ಮಾತನಾಡಿ ತಾವು ಕೂಡಲೇ ವೈಮಾನಿಕ ಸಮೀಕ್ಷೆ ಮಾಡಬೇಕು, ಕರ್ನಾಟಕದಲ್ಲಿ ಜನರು ಕಷ್ಟದಲ್ಲಿದ್ದಾರೆ, ಅವರ ಕಷ್ಟಕ್ಕೆ ತಾವು ಧಾವಿಸಬೇಕೆಂದು ಮನವಿ ಮಾಡಿಕೊಂಡಾಗ ಸೋನಿಯಾಗಾಂಧಿಯವರು ಮತ್ತು ಗೃಹ ಸಚಿವರಾದ ಚಿದಂಬರಂರವರು 5ನೇ ತಾರೀಖಿಗೆ ಬಂದರು. ಅಲ್ಲಿ 4ನೇ ತಾರೀಖಿನವರೆಗೆ ಪ್ರವಾಹ ಜಾಸ್ತಿ ಇತ್ತು. ಪ್ರಧಾನಿಯವರಾದ ಮನಮೋಹನಸಿಂಗ್ ರವರು 10ನೇ ತಾರೀಖಿಗೆ ಬಂದರು. ನಾವು ನಮ್ಮ ಪಕ್ಷದಿಂದ memorandum ಗಳನ್ನು ತಯಾರು ಮಾಡಿ ಸೋನಿಯಾಗಾಂಧಿ ಯವರಿಗೆ, ಚಿದಂಬರಂರವರಿಗೆ, ಮನಮೋಹನ್ ಸಿಂಗ್‌ರವರಿಗೆ ಕೊಟ್ಟು, ನಾವೂ ಕೂಡ ಒತ್ತಾಯ ಮಾಡಿದೆವು. ಆದರೂ ವಿರೋಧ ಪಕ್ಷದವರ ಸಹಕಾರವಿಲ್ಲವೆಂದು ಮುಖ್ಯಮಂತ್ರಿಯವರು ಹೇಳಿದರು. ದೆಹಲಿಗೆ ಕರೆದರೂ ಅವರು ಬರುವುದಿಲ್ಲವೆಂದು ಹೇಳಿದರು. ಇಲ್ಲಿ ಅಕ್ಟೋಬರ್ 12ನೇ ತಾರೀಖಿನಂದು All Party Meeting ನಡೆಯಿತೆಂದು ಅನಿಸುತ್ತದೆ. ಆ ಸಭೆಗೆ ನಾವೆಲ್ಲರೂ ಬಂದಿದ್ದೆವು. ಅಲ್ಲಿ ಮುಖ್ಯಮಂತ್ರಿಯವರು, ತಕ್ಷಣ ನಿಯೋಗ ಹೋಗುವುದು ಬೇಡ, ಪ್ರಧಾನ ಮಂತ್ರಿಯವರು ಬಂದು ಹೋಗಿದ್ದಾರೆ, Central Team ಬಂದು ಹೋದ ಮೇಲೆ ನಾವೆಲ್ಲ ದೆಹಲಿಗೆ ಹೋಗೋಣವೆಂದು ಹೇಳಿದರು.

ಆಮೇಲೆ, ಇದ್ದಕ್ಕಿದ್ದ ಹಾಗೆ ತೀರ್ಮಾನ ಮಾಡಿ, ನಮಗೊಂದು ಪತ್ರ ಬರೆದು ನೀವು ದೆಹಲಿಗೆ ಬರಬೇಕೆಂದು ಹೇಳಿದರು. ಆಮೇಲೆ, ದೆಹಲಿಗೆ ಹೋಗುವುದನ್ನು ಮುಂದಕ್ಕೆ ಹಾಕಿದ್ದೇವೆಂದು ಹೇಳಿ, ಅವರೇ ದೆಹಲಿಗೆ ಹೋದರು. ಆಮೇಲೆ, ವಿರೋಧ ಪಕ್ಷದವರು ಸಹಕಾರ ಕೊಡುವುದಿಲ್ಲವೆಂದು ಹೇಳಿದರು. ನಾವು ಎಲ್ಲಾ ರೀತಿಯಿಂದ ಸಹಕಾರ ಕೊಟ್ಟಿದ್ದೇವೆ. ಎಲ್ಲಾ ರೀತಿಯ ಸಹಕಾರ ಕೊಡುವ ಪ್ರಯತ್ನ ಮಾಡಿದ್ದೇವೆ. ಈಗಲೂ ಸಹಕಾರ ಕೊಡುತ್ತೇವೆ, ಮುಂದೆಯೂ ಕೊಡುತ್ತೇವೆ. ನೆರೆ ಹಾವಳಿಯಂಥ ವಿಷಯದಲ್ಲಿ ರಾಜಕೀಯ ಮಾಡುವ ಪ್ರಶ್ನೆಯೇ ಇಲ್ಲ. ಇದರಲ್ಲಿ ರಾಜಕೀಯ ಮಾಡಬೇಕಾದ ಆಗತ್ಯವಿಲ್ಲ. ರಾಜ್ಯದ ಜನರು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುವಾಗ, ಲಕ್ಷಾಂತರ ಜನ ಬೀದಿಪಾಲಾಗಿರುವಾಗ ನಾವು ಅದರಲ್ಲಿ ರಾಜಕೀಯ ಮಾಡಬೇಕು, ರಾಜಕೀಯ ಲಾಭ ಪಡೆದುಕೊಳ್ಳಬೇಕು ಎನ್ನತಕ್ಕಂಥ ಉದ್ದೇಶ ನಮ್ಮ ಪಕ್ಷಕ್ಕಂತೂ ಇಲ್ಲ. I making it very very clear. ಆದರೆ, ರಾಜಕೀಯವಾಗಿ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಪ್ರಧಾನ ಮಂತ್ರಿಯವರು ಬಂದು 1000 ಕೋಟಿ ರೂಪಾಯಿಗಳನ್ನು ನೀಡಲಾಗುವುದೆಂದು ಘೋಷಣೆ ಮಾಡಿದರು. ಈಗಾಗಲೇ 500 ಕೋಟಿ ರೂಪಾಯಿಗಳನ್ನು ಬಿಡುಗಡೆ ಸಹ ಮಾಡಿದ್ದು. ಇನ್ನೂ ಸಹ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಮುಖ್ಯಮಂತ್ರಿಯವರು ಇದೆಲ್ಲ ಘೋಷಣೆಯಾದ ಮೇಲೆ, ಕೇಂದ್ರ ಸರ್ಕಾರ ನಮ್ಮ ರಾಜ್ಯದ ನೆರವಿಗೆ ಬಂದಿದೆ ಎಂದು Statement ಕೊಟ್ಟರು. ಹೇಳುವುದನ್ನೆಲ್ಲ ಹೇಳಿಬಿಟ್ಟು, ಆಮೇಲೊಂದು Statement ಕೊಟ್ಟರು. ಕೇಂದ್ರ ಸರ್ಕಾರ 1000 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಕಳೆದ ವರ್ಷ ಖರ್ಚು ಮಾಡಿದ್ದು, ಅದರಲ್ಲಿ ಉಳಿದುಕೊಂಡಿದ್ದು ಎಲ್ಲಾ ಸೇರಿ CRF, NCCF ನಲ್ಲಿ ಸುಮಾರು 450 ಕೋಟಿ ರೂಪಾಯಿ ಕೊಟ್ಟಿದ್ದಾರೆ. ನೀವು ಇವತ್ತಿನವರೆಗೆ 1800 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿದ್ದೀರಿ. 1700 ಕೋಟಿ ರೂಪಾಯಿ ಚಿಲ್ಲರೆ ಪ್ರವಾಹಕ್ಕೆ, 100 ಚಿಲ್ಲರೆ ಕೋಟಿ ರೂಪಾಯಿ ಬರ ಪರಿಹಾರಕ್ಕೆ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದಿರಿ. ಕೇಂದ್ರ ಸರ್ಕಾರ ಕೊಟ್ಟಿದ್ದು, CRF, NCCF ನಿಂದ ಕೊಟ್ಟಿದ್ದು, ಸಾರ್ವಜನಿಕರು ಕೊಟ್ಟಿರುವ ಫಂಡ್, ಬೇರೆ ಬೇರೆಯವರು ವಂತಿಗೆ ಕೊಟ್ಟಿರುವುದು, ಸರ್ಕಾರಿ ನೌಕರರು ಕೊಟ್ಟಿರುವಂಥದ್ದು ಇವೆಲ್ಲಾ ಆದರೂ ಕೂಡ ನೀವೇನೂ ರಾಜ್ಯ

ಸರ್ಕಾರದಿಂದ ಹೆಚ್ಚಾಗಿ ಹಣವನ್ನು ಖರ್ಚು ಮಾಡಿಲ್ಲ. ಕೊಡುವುದಕ್ಕೆ ನಿಮ್ಮ ಸರ್ಕಾರದಲ್ಲಿ ಹಣವಿಲ್ಲ, ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನೆಲ್ಲ ಹಾಳು ಮಾಡಿಬಿಟ್ಟಿದ್ದೀರಿ. ಸಂಬಳ ಕೊಡುವುದಕ್ಕೆ ಹಣವೇ ಇಲ್ಲದೆ security ಯನ್ನು ಅಡವಿಟ್ಟು Reserve Bank ನಿಂದ ಹಣ ತೆಗೆದುಕೊಂಡು ಬರುವ ಪರಿಸ್ಥಿತಿ ಬಂದಿದೆ. ಈ ಬಗ್ಗೆ ಚರ್ಚೆಯಾಗಲಿ ಎಂದೇ ನಾನು ಹೇಳುತ್ತಿದ್ದೇನೆ. ರಾಜ್ಯದ Finance ಹೇಗಿದೆ ಎಂದು ಚರ್ಚೆ ಮಾಡೋಣ. ಏನೇನಾಗಿದೆ ಎಂದು ಹೇಳೋಣ. ಈಗ net burden ಏನು? What is the debt service ಎನ್ನುವುದನ್ನೆಲ್ಲ ಹೇಳೋಣ. ನೀವು Helicopter ನಲ್ಲಿ ಹೋಗಿ ಬಹಳಷ್ಟು ಪ್ರಚಾರ ಮಾಡಿದಿರಿ. ಅದಕ್ಕೋಸ್ಕರ ನೀವು ಬಹಳಷ್ಟು ಹಣ ಖರ್ಚು ಮಾಡಿದ್ದೀರಿ. ಮಾಡಿ, ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಅಗತ್ಯ ವಿರುವ ಕಡೆ ಹಣ ಖರ್ಚು ಮಾಡಲೇಬೇಕು, ಪ್ರಯಾಣ ಮಾಡಲೇಬೇಕು. Helicopter ಅನ್ನು ಉಪಯೋಗಿಸಬೇಡಿ ಎಂದು ಹೇಳುವುದಿಲ್ಲ. ಆದರೆ, ನಿಮ್ಮ ಪ್ರಚಾರಕ್ಕೂ, ನಿಮ್ಮ ಕೃತಿಗೂ, ವಾಸ್ತವವಾಗಿ ಆಗಿರುವುದಕ್ಕೂ ಸಂಬಂಧವಿರಬೇಕಲ್ಲವೇ? ಪ್ರಚಾರವೇ ಬೇರೆ, ನಡೆದಿರುವುದೇ ಬೇರೆ. ನೇಕಾರರು, ಗುಡಿ ಕೈಗಾರಿಕೆ ಮಾಡುವವರೆಲ್ಲ ಸಂಕಷ್ಟದಲ್ಲಿದ್ದಾರೆ. ನೀವು ಇವರ ಸಾಲ ಮನ್ನಾ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೀರಿ. ಈ ವರ್ಷ ರೈತರ ಈ ಸಾಲವನ್ನು ಮನ್ನಾ ಮಾಡುತ್ತೇವೆಂದು ನೀವು ಘೋಷಣೆ ಮಾಡಿ. ಹಣವಿಲ್ಲವೆಂದರೆ, ನೀವು ಮಾಡಬೇಕು. ಏಕೆಂದರೆ, ನೀವು ಸರ್ಕಾರ ನಡೆಸುತ್ತಿದ್ದೀರಲ್ಲ. ಹಾಗಾದರೆ, ನೀವು ಅಧಿಕಾರ ಬಿಟ್ಟುಹೋಗಿ, ನಾವು ಬಂದು ಮಾಡುತ್ತೇವೆ.

(12-30 PM)

ನಾವು ಹಣವನ್ನು ಉತ್ಪನ್ನ ಮಾಡುತ್ತೇವೆ. ನಾವು ಸಂಪನ್ಮೂಲ ವನ್ನು ಕ್ರೋಢೀಕರಣ ಮಾಡುತ್ತೇವೆ. ಯಡಿಯೂರಪ್ಪನವರೇ, ನೀವು ಸಂಪನ್ಮೂಲವನ್ನೇ ಕ್ರೋಢೀಕರಣ ಮಾಡುವುದಿಲ್ಲವಲ್ಲಾ. ಕಬ್ಬಿಣದ ಅದಿರು, ಮ್ಯಾಂಗನೀಸ್ ಸಾಗಿಸುವ ಲಾರಿಗಳ ಮೇಲೆ 1,000 ರೂ. ತೆರಿಗೆ ವಿಧಿಸುತ್ತೇವೆಂದು ಹೇಳಿ ಅದನ್ನು ಏಕೆ ಕೈಬಿಟ್ಟಿರಿ? ಇದನ್ನು ಡಿಸೆಂಬರ್ 1 ರಿಂದ ಜಾರಿಗೆ ತರಬೇಕಿತ್ತಲ್ಲವೇ? ಆ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದೀರಲ್ಲಾ. ಅದನ್ನು ಏಕೆ ಕೈಬಿಟ್ಟಿರಿ? ಹಾಗಾದರೆ, ಸರ್ಕಾರಕ್ಕೆ ಸಂಪನ್ಮೂಲ ಹೇಗೆ ಸಂಗ್ರಹಣೆಯಾಗುತ್ತದೆ? 200, 500, 1000 ರೂ.

ಗಳಂತೆ ತೆರಿಗೆ ವಿಧಿಸಬೇಕೆಂದು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ Finance Department, PWD ಇಲಾಖೆಯಿಂದ ಹೋಗಿತ್ತಲ್ಲ. ಅದನ್ನೇಕೆ ಕೈಬಿಟ್ಟಿರಿ? ರಾಜ್ಯದ ಹಿತಕ್ಕಿಂತ ಕುರ್ಚಿ ಬಹಳ ಮುಖ್ಯವಾಯಿತಲ್ಲವೇ? ಸಂಪನ್ಮೂಲ ಕ್ರೋಢೀಕರಣ ಮಾಡದೆ ಹಣ ಇಲ್ಲ ಎಂದರೆ ಹೇಗೆ? ಸಂಪನ್ಮೂಲ ಕ್ರೋಢೀಕರಣ ಮಾಡುವುದರಲ್ಲಿ ಹಿಂದೆ ಬಿದ್ದು ನಮ್ಮ ಹತ್ತಿರ ಹಣ ಇಲ್ಲ ಎಂದು ಹೇಳುತ್ತೀರಿ. 1800 ಕೋಟಿ ರೂ.ಗಳಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾಗಿರುವುದು ಅಂದರೆ ನಿಮ್ಮ ಸ್ವಂತ treasury ಯಿಂದ ಹೋಗಿರುವುದು, ಸಂಪನ್ಮೂಲದಿಂದ ಹೋಗಿರುವುದು not even 300-400 crores. ಇದರಲ್ಲಿ ವಂತಿಗೆಗಳು ಕೇಂದ್ರ ಸರ್ಕಾರ ಕೊಟ್ಟಿರುವುದು ಇದೆ. ತೆರೆದಂಥ ಗಂಜಿ ಕೇಂದ್ರಗಳು ಒಂದು ವಾರ ಸಹ ನಡೆಯಲಿಲ್ಲ. 1700 ಚಿಲ್ಲರೆ ಗಂಜಿ ಕೇಂದ್ರ ತೆರೆದೆವು, ಅದರಲ್ಲಿ ಸಾವಿರಾರು ಜನರನ್ನು ಇರಿಸಿದೆವು ಎಂದು ಹೇಳಿದಿರಿ. ಆದರೆ, ಅಲ್ಲಿ ಗಂಜಿ ಕೇಂದ್ರವೇ ಇಲ್ಲ. ಇವತ್ತಿನ ವರೆಗೆ ಗ್ರಾಮಗಳನ್ನು ಸ್ಥಳಾಂತರ ಮಾಡಲಿಕ್ಕೆ ಪೂಜೆ ಮಾಡಿದ್ದೀರಲ್ಲಾ, ಎಲ್ಲಿಯಾದರೂ ಒಂದು ಕಡೆ ಜನರಿಗೆ ಬೇಕಾದ ಮೂಲಭೂತ ಸೌಕರ್ಯ ಗಳಾದ ರಸ್ತೆ, ಕುಡಿಯುವ ನೀರು, ಲೈಟ್ ಇವುಗಳನ್ನು create ಮಾಡಿದ್ದೀರಾ? 29 ಸಾವಿರ ಕಿ.ಮೀ. ರಸ್ತೆ damage ಆಗಿದೆ ಎಂದು ಹೇಳಿದ್ದೀರಿ. ಅದರಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ದುರಸ್ತಿಪಡಿಸಿದ್ದೀರಿ? 29 ಸಾವಿರ ಕಿ.ಮೀ. damage ಆದ ರಸ್ತೆಗಳು transport ಗೆ ಯೋಗ್ಯವಿಲ್ಲ. ನಿಮ್ಮ norms ಪ್ರಕಾರ 30 ದಿವಸದೊಳಗೆ ರಸ್ತೆ, bridge ಗಳನ್ನು restore ಮಾಡಬೇಕೆಂದಿದೆ. ರಾಯಚೂರಿನ ಪೋತನಾಳ್‌ನಲ್ಲಿ ಒಂದು bridge ಬಿದ್ದುಹೋಗಿದ್ದು ಇವತ್ತಿನವರೆಗೆ ಅದನ್ನು ಸರಿಪಡಿಸುವುದಕ್ಕೆ ಯಾರೂ ಹೋಗಿಲ್ಲ. ಆ ಭಾಗದ ಜನರು ಏನಾಗಬೇಕು? ನಾವು ಅಲ್ಲಿಗೆ ಹೋಗಿ ನೋಡಿದ್ದೇವೆ. ರೋಣ ಕ್ಷೇತ್ರದ ಹೊಳೆ ಆಲೂರಿನಲ್ಲಿ ಪ್ರವಾಹ ಬಂದು 4–5 ದಿನಗಳಾಗಿದ್ದರೂ ಸಹ ಕುಡಿಯುವ ನೀರು ಸಿಗುತ್ತಿರಲಿಲ್ಲ. ನಾವು ಅಲ್ಲಿಗೆ ಹೋಗಿ ನೋಡಿದ್ದೇವೆ. 2007ರಲ್ಲಿಯೇ ಸ್ಥಳಾಂತರ ಮಾಡಲಿಕ್ಕೆ ಗುದ್ದಲಿ ಪೂಜೆ ಮಾಡಿ ಬಂದಿದ್ದೆವು. ಆದರೆ, ಆ ಕೆಲಸ ಇವತ್ತಿನವರೆಗೂ ಆಗಿಲ್ಲ. ಒಂದು ಕಡೆ ನೀವು ಕೇಂದ್ರ ಸರ್ಕಾರ ಕೊಟ್ಟಿರುವ ಹಣವನ್ನೂ ಸರಿಯಾದ ರೀತಿಯಲ್ಲಿ ಖರ್ಚು ಮಾಡಿಲ್ಲ. ಸರಿಯಾದ ರೀತಿಯಲ್ಲಿ, ನ್ಯಾಯಯುತ

ರೀತಿಯಲ್ಲಿ ಜನರಿಗೆ ಸಿಗಬೇಕಾದ ಪರಿಹಾರ ಕೊಡಲಿಕ್ಕೂ ಪ್ರಯತ್ನ ಮಾಡಲಿಲ್ಲ. ಸರ್ಕಾರ ಮಾನವೀಯತೆಯಿಂದ ನಡೆದುಕೊಂಡಿಲ್ಲ. ಒಬ್ಬೊಬ್ಬರಿಗೆ ಒಂದೊಂದು ರೀತಿ ಪರಿಹಾರ ಕೊಡುವ ಕೆಲಸ ಮಾಡಿದೆ. ನೀವು ತಾರತಮ್ಯ ಮಾಡಿದ್ದೀರಿ, ಬಿಜೆಪಿಯವರಿಗೆ, ಕಾಂಗ್ರೆಸ್‌ನವರಿಗೆ, ಜೆಡಿಎಸ್‌ನವರಿಗೆ ಒಂದೊಂದು ತರಹ ಇದರಲ್ಲಿ ತಾರತಮ್ಯ ಮಾಡುವುದು ಎಷ್ಟರಮಟ್ಟಿಗೆ ಸರಿ? ಬಿಜೆಪಿ, ಜೆಡಿಎಸ್, ಕಾಂಗ್ರೆಸ್‌ನ ಜನರು ಸತ್ತರೂ ಅದು ಸಾವೇ ಆಗಿರುತ್ತದೆ. ಅವರೂ ಮನುಷ್ಯರು, ಇವರೂ ಮನುಷ್ಯರು. ಅವರ ಮನೆಗಳು ಹಾಳಾದರೂ, ಇವರ ಮನೆಗಳು ಹಾಳಾದರೂ ಒಂದೆಯೇ. ಒಟ್ಟಾರೆ ರಾಜ್ಯದ ಹಳ್ಳಿಗಾಡಿನ ಆರ್ಥಿಕ ಪರಿಸ್ಥಿತಿ ನಾಶವಾಗುತ್ತಿದೆ. ಇಡೀ economy ಅನ್ನು rebuild ಮಾಡುವುದು it is the responsibility of the Government. ನದಿ ದಡಗಳಲ್ಲಿನ ಜಮೀನುಗಳು ಕೂಡ ಪ್ರವಾಹದಿಂದ ಕೊಚ್ಚಿಹೋಗಿವೆ. ಇನ್ನೂ 2–3 ವರ್ಷಗಳಾದರೂ ಆ ಜಾಗದಲ್ಲಿ ಏನೂ ಬೆಳೆಯುವುದಕ್ಕಾಗುವುದಿಲ್ಲ. ಅಷ್ಟರಮಟ್ಟಿಗೆ ಅಲ್ಲಿ ಸವಕಲಾಗಿದೆ. ದೋಣಿಹಳ್ಳದ ಪ್ರವಾಹದಿಂದಾಗಿ ತೊಣಸಿಹಾಳದಲ್ಲಿಯೂ ಏನೂ ಬೆಳೆಯುವುದಕ್ಕಾಗುವುದಿಲ್ಲ. ಹಡಗನಾಳ್, ಅಗ್ನಹಾಳ್ ಅಲ್ಲೆಲ್ಲ ನೋಡಿಕೊಂಡು ಬಂದಿದ್ದೇವೆ. ಇಂಡಿ ತಾಲ್ಲೂಕಿನ ಅರ್ಜುನಗಿಯಲ್ಲಿ, ಬೆಳಗಾಂನಲ್ಲಿ, ಗದಗ ಜಿಲ್ಲೆ, ಎಲ್ಲಾ ಕಡೆ ಸಮಸ್ಯೆಯಾಗಿದ್ದು, ನಿಮ್ಮಲ್ಲಿ ಯಾರಾದರೂ ಹೋಗಿ ನೋಡಿದ್ದಾರೆಯೇ? ಹೇಳಿ ನೀವು ಈ ರೀತಿ ಮಾಡುತ್ತಿದ್ದೀರಿ ಎಂದು ನೀವು ಹೋಗಿ ಅವರಿಗೆ ಹೇಳಿ. ಅವರು ಹಾಗೆ ಹೇಳಿದರೆ ನೀವು ಕೇಳಿಕೊಂಡು ಬಂದುಬಿಟ್ಟಿದ್ದೀರಾ? ನೀವು ಅಲ್ಲಿಗೆ ಹೋಗಿದ್ದಿರಾ? ABVPಯವರು ನನ್ನ ಮಾತು ಕೇಳಿಕೊಂಡು ಮುದ್ದೆಬಿಹಾಳದಲ್ಲಿ ಆ ರೀತಿ ಮಾಡುತ್ತಿದ್ದಾರೆಯೇ? ABVP ಯವರು ನಿಮ್ಮ ಮಾತು ಕೇಳಿಕೊಂಡು ಮಾಡುತ್ತಿದ್ದಾರೆಯೇ? ಮುದ್ದೆಬಿಹಾಳದಲ್ಲಿ ನೀವು ಹೋಗಿ ABVP ಯವರನ್ನು ಕೇಳಿ. ಇನ್ನು, ಹಣವನ್ನು ನಿಮಗೆ ಬೇಕಾದ ಬ್ಯಾಂಕ್‌ನಲ್ಲಿ ಇಡುತ್ತೀರಿ. ಆ ಹಣವನ್ನು ಯಾರಿಗೂ ಕೊಡುವುದಿಲ್ಲ. ಲೋಕಾಯುಕ್ತರ ವರದಿಯನ್ನು, ಲೋಕಾಯುಕ್ತರು 11ನೇ ತಾರೀಖು ಬರೆದಿರುವುದನ್ನು ನೀವು ಓದಿದ್ದೀರಿ ಎಂದು ನಾನು ಭಾವಿಸಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ) : ಕಾಂಗ್ರೆಸ್‌ನ ಶಾಸಕರು, ಬೇರೆ ಸ್ನೇಹಿತರು, ನೆರೆ ಸಂತ್ರಸ್ತರ ಕಾರ್ಯಕ್ರಮಕ್ಕೆ ಬಂದು ಆ ಸಭೆಗೆ ಬಂದು ಆಗುತ್ತಿರುವ ಕೆಲಸಕಾರ್ಯಗಳನ್ನು ಅಚ್ಚರಿ ವ್ಯಕ್ತಪಡಿಸಿ

ಪಕ್ಷಭೇದ ಮರೆತು, ಇಷ್ಟು ಒಳ್ಳೆಯ ಕೆಲಸ ಆಗುತ್ತಿರುವಾಗ, ಊರುಗಳನ್ನು shift ಮಾಡುತ್ತಿದ್ದೀರಿ ಯಡಿಯೂರಪ್ಪನವರೆ ಎಂದು ಹೇಳಿ ಭೂಮಿ ಪೂಜೆಗೆ ಬಂದು ಸಂತೋಷದಿಂದ ಇದ್ದಾರೆ. ಅವರು ಏನು ಮಾತನಾಡುತ್ತಾರೆ ಎನ್ನುವುದನ್ನು ಕೇಳುವುದಕ್ಕೋಸ್ಕರ ನಾನು ಶಾಂತವಾಗಿ ಕುಳಿತಿದ್ದೇನೆ. ನಾನು ಆ ಭಾಗದಲ್ಲಿ 27 ದಿವಸ ಪ್ರವಾಸ ಮಾಡಿ ಅಲ್ಲಿ ಉಳಿದಿದ್ದೇನೆ. ಹಳ್ಳಿ ಹಳ್ಳಿ ತಿರುಗಿದ್ದೇನೆ. ಚಿದಂಬರಂ, ವೀರಪ್ಪ ಮೊಯಿಲಿ, ದೇಶಪಾಂಡೆಯವರು ಆ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಾಡಿ ಹೊಗಳಿ ಬಂದಿದ್ದಾರೆ. ಸ್ವಾತಂತ್ರ್ಯ ಬಂದ ಮೇಲೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಿಂದೆಂದೂ ಈ ರೀತಿ ಆಗಿರಲಿಲ್ಲ ಎಂದು ಜನ ಮೆಚ್ಚಿದ್ದಾರೆ. ಮಾಡಬೇಕಾದ್ದು ಬಹಳ ಇದೆ. ಎಲ್ಲಾ ಒಟ್ಟಾಗಿ ಸೇರಿ ಮಾಡೋಣ.

ಶ್ರೀ ಸಿದ್ದರಾಮಯ್ಯ : ಅದೆಲ್ಲ ನಿಜ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸುಮಾರು ಆರರಿಂದ ಆರೂವರೆ ಲಕ್ಷ ಮನೆಗಳು ಹಾಳಾಗಿವೆ, ಬಿದ್ದುಹೋಗಿವೆ ಎಂದರೆ ಕೇಂದ್ರದಿಂದ 7437 ಮನೆಗಳು ಮಾತ್ರ ಮಂಜೂರಾಗಿ ಬಂದಿದೆ. ಇದೆಲ್ಲದರ ಬಗ್ಗೆ ಚರ್ಚೆ ಮಾಡಿ ಕೇಂದ್ರಕ್ಕೆ ಹೋಗಿ ಮನವಿ ಮಾಡೋಣ. ಕೇಂದ್ರದ ನಾಯಕರ ಬಗ್ಗೆ ನನಗೆ ಈಗಲೂ ವಿಶ್ವಾಸವಿದೆ. ನೀವೂ ಸ್ವಲ್ಪ ಧಾರಾಳ ಮನಸ್ಸು ಮಾಡಿ ನಮ್ಮ ಜೊತೆ ಬಂದರೆ ಅವರು ನೆರವು ಕೊಡುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಎಲ್ಲಿಯೋ ಒಂದು ಕಡೆ ನೀವು ತೊಡರುಗಾಲು ಹಾಕುತ್ತಿದ್ದೀರಿ ಎನ್ನುವ ಭಯ ನನಗೆ ಇದೆ.

ಶ್ರೀ ಸಿದ್ದರಾಮಯ್ಯ : ನೀವು ನಮಗೆ ತೊಡರುಗಾಲು ಹಾಕುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ : Impossible.

ಶ್ರೀ ಸಿದ್ದರಾಮಯ್ಯ : Impossible ಎಂದರೆ? ಅದೇನು memorandum ಕೊಡುತ್ತೀರಾ, ಕೊಡಿ ಎಂದು ಕೇಳಿದರೆ, ನಿಮಗೆ ಏಕೆ ಕೊಡಬೇಕು ಎಂದರೆ ಏನು ಹೇಳಬೇಕು? ನಾವೇನು memorandum ಕೊಡುತ್ತೇವೆನ್ನುವುದನ್ನು ವಿರೋಧ ಪಕ್ಷದವರಿಗೆ ಕೊಡುವುದಿಲ್ಲ, ಬರುವುದಿದ್ದರೆ ನಮ್ಮ ಜೊತೆ ಬನ್ನಿ ಎಂದು ಹೇಳುತ್ತೀರಿ. ಹಿಂದೆ ನೀವು ವಿರೋಧ ಪಕ್ಷದ ನಾಯಕರಾಗಿದ್ದಾಗ ಹೀಗೆಯೇ ಆಗಿತ್ತೇ? ಲೋಕಾಯುಕ್ತರು 7 team ಮಾಡಿ technical persons ಅನ್ನು ಎಲ್ಲಾ ಕಡೆ ಕಳುಹಿಸಿ ವರದಿ ತರಿಸಿಕೊಂಡರು. ಇದನ್ನು ನಾನು ಹೇಳಿದ್ದೇನೆಯೇ? ಇದು ನಮ್ಮ

ವರದಿಯೇ? ಗುದ್ದಲಿ ಪೂಜೆ ಮಾಡುವಾಗ ನೀವು ಯಾರೂ ಬಂದಿರಲಿಲ್ಲ ಎಂದು ಹೇಳುತ್ತೀರಿ. ನಿಮ್ಮ ಮಂತ್ರಿಯವರಾದ ಕರುಣಾಕರರೆಡ್ಡಿಯವರೇ ನೀವು ಗುದ್ದಲಿ ಪೂಜೆ ಮಾಡುವಾಗ ಬರಲಿಲ್ಲ. ನೀವು ನಮಗೆ ಹೇಳುತ್ತೀರಿ. Revenue Minister ಆಗಿ ಅವರೇ ನಿಮ್ಮ ಗುದ್ದಲಿ ಪೂಜೆಗೆ ಬಂದಿಲ್ಲ. ಅವರೇ ಬೇರೆ ಕಡೆ ಪೂಜೆ ಮಾಡಿದರು. ಇದಕ್ಕೇನು ಉತ್ತರ ಹೇಳುತ್ತೀರಿ? It is reported that in certain cases works are taken up without technical sanction, that quality control measures are totally ignored and not properly enforced.

ಬಹಳ ಭ್ರಷ್ಟಾಚಾರ ನಡೆದಿದೆಯೆಂದು ಹೇಳಿದ್ದಾರೆ. ಟೆಕ್ನಿಕಲ್ ಆಗಿ ಇಲ್ಲ, ಅಲ್ಲಿ ಯಾರು ಅವರು ಹೇಗೆ ಹೇಳುತ್ತಾರೆ ಹಾಗೆ, ಜಿಲ್ಲಾ ಮಂತ್ರಿಗಳು ಹೇಳಿದ್ದೆ, ಅವರು ಅಪ್ರೂವಲ್ ಮಾಡಿದ್ದೆ ಕೆಲಸ. ಅಲ್ಲಿ ಲೋಕಲ್ ಎಂಎಲ್ಎ ಗಳನ್ನು ಯಾರನ್ನೂ ಕೇಳುವ ಹಾಗೆ ಇಲ್ಲ. ಅವರೆಲ್ಲರೂ ಏಕೆ ಬರುತ್ತಾರೆ? ಅನೇಕ ಕಡೆಗಳಲ್ಲಿ ನಮ್ಮ ಎಂಎಲ್ಎ ರವರು ಇರುವ ಕಡೆ, ಪರಿಹಾರ ಕೊಡುತ್ತೀರಲ್ಲ, ಅಲ್ಲಿ ಲೋಕಲ್ ಜನ ಯಾರನ್ನು ಆಯ್ಕೆ ಮಾಡಿದ್ದರಲ್ಲ ಅವರ ಮೂಲಕ ಕೊಡುವ ಹಾಗೆ ಇಲ್ಲವೆ? ನೀವು ಮಾತ್ರ ನಿಮ್ಮ ಎಂಎಲ್ಎ ಗಳು ನೀವು ತೆಗೆದುಕೊಂಡು ಹೋಗಿ ಕೊಡಬೇಕು. ಸಂಡೂರಿನ ಎಂಎಲ್ಎ ಆದ ಮಾನ್ಯ ತುಕರಾಂ ನವರು, ಅಲ್ಲಿನ ತಹಸೀಲ್ದಾರವರಿಗೆ ಕೇಳಿದ್ದಾರೆ. ನೋಡಿ ನಮಗೆ ಈಗ ಯಾವ ಪರಿಸ್ಥಿತಿ ಬಂದು ಬಿಟ್ಟಿದೆ. ಅವರು ಅಲ್ಲಿನ ತಹಶೀಲ್ದಾರ್ ರವರಿಗೆ, ನೀವು ಪರಿಹಾರ ಕೊಡುವವರ ಹತ್ತಿರ ಹೋಗುವಾಗ ನಾನು ನಿಮ್ಮ ಜೊತೆಯಲ್ಲಿ ಬರುತ್ತೇನೆಂದು ಕೇಳಿದರೆ, ಇಲ್ಲ ಇಲ್ಲ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ನಿಮ್ಮನ್ನು ಕರೆದುಕೊಂಡು ಹೋಗಬೇಡಿ ಎಂದು ಹೇಳಿದ್ದಾರೆ, ಹೀಗಾಗಿ ನಾನು ನಿಮ್ಮನ್ನು ಕರೆದುಕೊಂಡು ಹೋಗುವುದಿಲ್ಲವೆಂದು ಹೇಳುತ್ತಾರೆ. It is not my Statement. ನಿಮ್ಮ ತಹಶೀಲ್ದಾರ್ ರವರಿಗೆ ಹೇಳಿ ಎಂದು ನಾನೇ ಡಿ.ಸಿ.ಗೆ ಫೋನು ಮಾಡಿದೆ. ನೀವು ಹೋಗಿ ಕೊಡಬಹುದು, ನಿಮ್ಮ ಎಂಎಲ್ಎ ರವರು ಹೋಗಿ ಕೊಡಬಹುದು, ಲೋಕಸಭೆಯ ಸದಸ್ಯರು ಹೋಗಿ ಕೊಡಬಹುದು, ಅಲ್ಲಿ ಸೋತಿರು ವಂಥವರು ಬಂದು ಕೊಡಬಹುದು. ಅಧಿಕಾರಿಗಳು ತೆಗೆದುಕೊಂಡು ಹೋಗಿ ಕೊಡಬಹುದು. ಆದರೆ, ಚುನಾಯಿತ ಪ್ರತಿನಿಧಿಗಳು ನಾನು ಬರುತ್ತೇನೆ ನಿಮ್ಮ ಜೊತೆಗೆ ಕರೆದುಕೊಂಡು ಹೋಗಿ ಎಂದು ಕೇಳಿದರೆ, ಇಲ್ಲ ಇಲ್ಲ ನಿಮ್ಮನ್ನು ಕರೆದುಕೊಂಡು ಹೋಗುವುದಿಲ್ಲವೆಂದು ಹೇಳುವಷ್ಟು ದಾಷ್ಟ್ಯ ಒಬ್ಬ

ತಹಶೀಲ್ದಾರ್‌ರವರಿಗೆ ಇದೆ ಎಂದರೆ ನಿಮ್ಮ ಸರ್ಕಾರ ಇದೆಯೆ? ಇದನ್ನು democratic Government ಎಂದು ಕರೆಯಬೇಕೆ? ಇದು ಪ್ರಜಾತಂತ್ರದ ವ್ಯವಸ್ಥೆಯಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ್ : ಸಾರಸಗಟವಾಗಿ ಹೇಳಬೇಡಿ. ತಾವು ಬೇಕಾದರೆ ಕೊಪ್ಪಳ-ಬಿಜಾಪುರ ಜಿಲ್ಲೆಯ ನಿಮ್ಮ ಶಾಸಕರು ಇದ್ದಾರೆ ಅವರನ್ನು ಕೇಳಿ.

ಶ್ರೀ ಸಿದ್ದರಾಮಯ್ಯ : ನಾನು ಬಿಜಾಪುರದ್ದು ಹೇಳುತ್ತಿಲ್ಲ. ನಿಮಗೆ ಸಂಡೂರದ್ದು ಗೊತ್ತಿದೆಯೆ?

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ್ : ಸಾರಸಗಟಾಗಿ ಹೇಳಬೇಡಿ. ಆ ರೀತಿ ಹೇಳಬೇಡಿ. ಬೇಕಾದರೆ ಬಿಜಾಪುರ ಜಿಲ್ಲೆಯಲ್ಲಿನ ನಿಮ್ಮ ಶಾಸಕರನ್ನು ಕೇಳಿ ನೋಡಿ. ಪಾಟೀಲ್‌ರೆ ನಿಮ್ಮನ್ನು ಕರೆದುಕೊಂಡು ಹೋಗಿಲ್ಲವೆ? ಅವರು ಬೇಕಾದರೆ ತಾರತಮ್ಯವಾಗಿದೆ ಎಂದು ಹೇಳಲಿ.

ಶ್ರೀ ಸಿದ್ದರಾಮಯ್ಯ : ಯಾರು ಹೇಳಬೇಕು?

ಶ್ರೀ ಗೋವಿಂದ ಎಂ. ಕಾರಜೋಳ್ : ನಾನು ಎರಡು ಜಿಲ್ಲೆಗೆ ಉಸ್ತುವಾರಿ ಮಂತ್ರಿಯಾಗಿದ್ದೇನೆ. ತಾರತಮ್ಯ ಮಾಡಿದ್ದಾರೆಂದು ಅವರು ಬೇಕಾದರೆ ಹೇಳಲಿ.

(ಗೊಂದಲ)

ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ : ಬಿಜಾಪುರ ಜಿಲ್ಲೆಯ ಬಗ್ಗೆ ಹೇಳುವುದಾದರೆ,

ಶ್ರೀ ಎಂ.ಬಿ.ಪಾಟೀಲ್ : ಬಿದ್ದು ಹೋಗಿರುವ ಮನೆಗಳಿಗೆ ಪರಿಹಾರ ಕೊಡುವಾಗ, ಕಚ್ಚಾ ಮನೆ, ಪಕ್ಕಾ ಮನೆ, ಇವುಗಳಲ್ಲಿ ಸ್ವಲ್ಪ ಆಗಿದೆ.

ಶ್ರೀ ಗೋವಿಂದ ಎಂ.ಕಾರಜೋಳ್ : ಆ ವಿಚಾರ ಅಲ್ಲ. ಪರಿಹಾರ ಕೊಡುವಾಗ ನಿಮ್ಮನ್ನು ಬಿಟ್ಟು ಹೋಗಿರುವ ಕೆಲಸ ಮಾಡಿದ್ದೇವೆಯೆ?

ಶ್ರೀ ಎಂ.ಬಿ.ಪಾಟೀಲ್ : ಅದು ಮಾಡಿಲ್ಲ. ಅದು ಆಗಿಲ್ಲ. ಬಿಟ್ಟು ಹೋಗಿಲ್ಲ. ಜೊತೆಗೆ ಕರೆದು ಕೊಂಡು ಹೋಗಿದ್ದಾರೆ ಇಲ್ಲವೆಂದು ಹೇಳುತ್ತಿಲ್ಲ. ಆದರೆ ತಾರತಮ್ಯವಾಗಿದೆ.

ಶ್ರೀ ಸಿದ್ದರಾಮಯ್ಯ : ಸಂಡೂರು ಬಗ್ಗೆ ಕೇಳಿದರೆ ನೀವು ಏಕೆ ಎದ್ದು ನಿಲ್ಲುತ್ತೀರಿ?

ಶ್ರೀ ಗೋವಿಂದ ಎಂ.ಕಾರಜೋಳ್ : ಸಾರಸಗಟಾಗಿ ತಾವು ಹೇಳಬೇಡಿ ಎಂದು ಹೇಳಿದೆ.

ಶ್ರೀ ಸಿದ್ದರಾಮಯ್ಯ : ಆಯಿತು ಬಿಡಿ, ಸಂಡೂರಿಗೆ ಯಾರು ಜವಾಬ್ದಾರರು?

ಅಧ್ಯಕ್ಷರು : ಆಯಿತು ಬಿಡಿ, ಅವರು ಯೀಲ್ಡ್ ಆಗಿಲ್ಲ.

ಶ್ರೀ ಸಿದ್ದರಾಮಯ್ಯ : ನಾವು ಮುಖ್ಯಮಂತ್ರಿಗಳಿಗೆ ಹೇಳುತ್ತಿರುವುದು.

ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ : ಸನ್ಮಾನ್ಯ ಉಸ್ತುವಾರಿ ಸಚಿವರಾದಂಥ ಗೋವಿಂದ ಕಾರಜೋಳ ರವರು ನಮ್ಮ ಜಿಲ್ಲೆಯಲ್ಲೂ ಕೂಡ ಅದೇ ರೀತಿ ನಡೆದುಕೊಂಡಿದ್ದಾರೆ. ನಮ್ಮ ಮತಕ್ಷೇತ್ರದಲ್ಲಿ ಎರಡು ಗ್ರಾಮಗಳಿಗೆ ಹೋಗಬೇಕಾದ ಸಂದರ್ಭದಲ್ಲಿ ಶಾಸಕರುಗಳಿಗೆ ಹೇಳದೇ ಹೋಗುತ್ತಾರೆ.

ಶ್ರೀ ಗೋವಿಂದ ಎಂ.ಕಾರಜೋಳ್ : ತಾರತಮ್ಯ ಏನು ಮಾಡಿದ್ದೇವೆ ಹೇಳಿ. ಇವತ್ತಿನವರೆಗೂ ನಾನು ಮಾಡಿಲ್ಲ.

ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ : ನೀವು ಕೂಡ ಪ್ರೋಟೋಕಾಲ್ ಪ್ರಕಾರ ಮಾಡಿಲ್ಲವೆಂದು ಹೇಳುತ್ತಿದ್ದೇವೆ. ನೀವು ನನ್ನ ಮತಕ್ಷೇತ್ರದಲ್ಲಿ ಎರಡು ಹಳ್ಳಿಗಳಿಗೆ ಹೋಗಿದ್ದೀರಿ. ಯಾವ ಶಾಸಕರನ್ನು ಕರೆದುಕೊಂಡು ಹೋಗಿದ್ದೀರಿ?

ಶ್ರೀ ಗೋವಿಂದ ಎಂ.ಕಾರಜೋಳ್ : ನೀವು ಬಂದಿಲ್ಲ. ನಾನು ನಿಮ್ಮನ್ನು ಕರೆದಿದ್ದೇವೆ.

(ಗೊಂದಲ)

ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ : ಬಂದಿಲ್ಲವೆಂದು ಹೇಳುವುದಲ್ಲ ನೀವು ಅಲ್ಲಿಗೆ ಹೋಗುತ್ತೀರೆಂದು ನಮಗೇನು ಕನಸು ಬಿದ್ದಿರಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ್ : ನಮ್ಮ ತಹಶೀಲ್ದಾರ್ ಮುಖಾಂತರ ನಿಮಗೆ ಹೇಳಿದ್ದೇವೆ. ಸಾರ್ ಇವರು ರಾಜಕಾರಣ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎ.ಎಸ್.ಪಾಟೀಲ್ ನಡಹಳ್ಳಿ : ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ನೀವು ಏನು ತಾರತಮ್ಯ ಮಾಡುತ್ತೀರಿ ಎಂಬುದು ನನಗೆ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ ನೀವು ಏನು ಮಾಡುತ್ತೀರಿ ಎಂಬುದು ನನಗೆ ಗೊತ್ತಿದೆ. ಅಲ್ಲಿ ರಾಜಕಾರಣ ಮಾಡುವ ಅವಶ್ಯಕತೆ ನಮಗೆ ಇಲ್ಲ.

ಶ್ರೀ ಗೋವಿಂದ ಎಂ.ಕಾರಜೋಳ್ : ಇದರಲ್ಲಿ ರಾಜಕಾರಣ ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, I quote, 'The nodal officers appointed by the district administration are not properly functioning. It is reported that in Siraguppa taluk contract for providing drinking water is given to the chairman and member of the town municipality.' ಇವೆಲ್ಲಾ ನಾನು ಹೇಳಿರುವುದೆ? ಲೋಕಾಯುಕ್ತರವರು ಚೀಫ್ ಸೆಕ್ರೇಟರಿಯವರಿಗೆ ಬರೆದಿರುವುದು. 'There are complaints that survey of damages caused to the houses is not done properly and appropriate compensation is not paid in respect of damage caused to pakka houses' ಎಂದು ವರದಿಯಲ್ಲಿ ಅವರೇ ಹೇಳಿದ್ದಾರೆ. ಇದನ್ನು ಸರಿಪಡಿಸಬೇಕೇ ಬೇಡವೆ? ಲೋಕಾಯುಕ್ತರು ಪೊಲಿಟಿಕಲ್ ಪಾರ್ಟಿಗೆ ಸೇರಿದವರೆ? 'In some cases the shed constructed for the rehabilitation of the disabled persons are not fit for human habitation.' ಪರಿಹಾರ ಅಂದರೆ ಇದೇನಾ? 'The cattle fodder supplied in few villages are not of good quality. Cheques issued in respect of the compensation in some cases have not been honoured by the banks.' ಇದೆಲ್ಲಾ ಅವರು ಬರೆದಿರುವ ಒಕ್ಕಣೆ. 'It is reported that in some villages the village accountants have been demanding money from the beneficiaries.' ಇದನ್ನು ನಾನು ಹೇಳಿರುವುದೆ? ವಿಲೇಜ್ ಅಕೌಂಟೆಂಟ್‌ಗಳು ಪರಿಹಾರದ ಹಣ ಕೊಡಲಿಕ್ಕೆ ದುಡ್ಡು ಕೇಳುತ್ತಿದ್ದಾರೆ. ಮತ್ತೆ ಎಲ್ಲಾ ಸರಿಯಾಗಿದೆ ಎಂದು ಹೇಳುತ್ತೀರಿ, ಸರಿಯಾಗಿದೆಯೆ? 'In some village there is heavy loss of live stock, but compensation is limited to some fixed number of animals.' ಇದನ್ನೆಲ್ಲಾ ಸರಿಪಡಿಸಬೇಕು. ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಇದನ್ನೆಲ್ಲಾ ಸರಿಪಡಿಸಿ, irregularity ಎಲ್ಲಾ ಸರಿಪಡಿಸಿ, ನ್ಯೂನತೆಗಳನ್ನು ಸರಿಪಡಿಸಿ ಎಂದು ಅವರು ಏನು ಪತ್ರ ಬರೆದಿದ್ದಾರೆ, ಆ ಪ್ರಕಾರ ನೀವು

ಇವುಗಳನ್ನೆಲ್ಲಾ ಸರಿಪಡಿಸಬೇಕು. I don't think, ನನಗೆ ಇವು ಯಾವುದು ಸರಿಪಡಿಸುವ ಹಾಗೆ ಕಾಣಿಸುತ್ತಿಲ್ಲ. ನನಗೆ ಇರುವ ಮಾಹಿತಿ ಪ್ರಕಾರ ನೀವು ಇವು ಯಾವುದಕ್ಕೂ ಕೂಡ ತಲೆಗೆ ಹಚ್ಚಿಕೊಂಡಿಲ್ಲ. 'Irregularities in distribution of compensation are also noticed in as much as compensation is being paid to persons who did not reside in the village. It is complained that in certain cases there is no proper assessment of compensation.' ಮುಂದೆ ಅವರು ಕೆಲವು ಶಿಫಾರಸ್ಸುಗಳನ್ನು ಮಾಡಿದ್ದಾರೆ. ವಿಲೇಜ್ ಅಕೌಂಟೆಂಟ್‌ರವರು ದುಡ್ಡು ತೆಗೆದುಕೊಳ್ಳುತ್ತಾರೆ, ನೋಡೆಲ್ ಆಫೀಸರ್‌ರವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಟೆಕ್ನಿಕಲ್ ಆಗಿ ಮಾಡಿಲ್ಲ. ಅವರಿಗೆ ಇಷ್ಟ ಬಂದ ಹಾಗೆ ಬಿಲ್ ಕೊಡುತ್ತಿದ್ದಾರೆ. ಕೆಲಸಗಳು ಅಪ್ರೂವಲ್ ಇಲ್ಲದ ಹಾಗೆ ಮಾಡುತ್ತಿದ್ದಾರೆ, ಟೆಕ್ನಿಕಲ್ ಅಪ್ರೂವಲ್ ಇಲ್ಲ, ಎಸ್ಟಿಮೇಟ್ ಇಲ್ಲ, ಏನೂ ಇಲ್ಲ, ಮನಸ್ಸಿಗೆ ಬಂದ ಹಾಗೆ ಅವರಿಗೆ ಯಾರಿಗೆ ಬೇಕೋ ಅವರಿಗೆ ಕೊಟ್ಟುಕೊಂಡು ಹೋಗುತ್ತಾರೆ. ನಿಜ, ಇಂಥ ಪ್ರವಾಹ, ಬರ ಬಂದಾಗ, ದುರುಪಯೋಗ ವಾಗುತ್ತಿರುವುದು ಬಹಳ ಜಾಸ್ತಿ ಇರುತ್ತದೆ. ಯಾವಾಗ ಜಿಲ್ಲಾ ಮಂತ್ರಿಗಳು ಹೋಗುವುದಿಲ್ಲ, ರಿವ್ಯೂ ಮಾಡುವುದಿಲ್ಲ, ಇನ್ಸ್‌ಪೆಕ್ಷನ್ ಮಾಡುವುದಿಲ್ಲ, ಎಂದರೆ ಏನಾಗುತ್ತದೆ? ರೂಲಿಂಗ್ ಪಾರ್ಟಿ ಎಂಎಲ್‌ಎಗಳು ಅಧಿಕಾರಿಗಳಿಗೆ ಒತ್ತಡ ಹಾಕಿ, ಅವರ ಮನಸ್ಸಿಗೆ ಬಂದ ಹಾಗೆ ಅವರ ಮೂಗಿನ ನೇರಕ್ಕೆ, ಅವರ ಮರ್ಜಿಗನುಗುಣವಾಗಿ, ಮಾಡಿ ಎಂದು ಹೇಳುತ್ತಾರೆ. ನಮ್ಮ ಎಂಎಲ್‌ಎಗಳು ಇದ್ದರೆ ಅವರನ್ನು ಜೊತೆಯಲ್ಲಿ ಹಳ್ಳಿಗಳಿಗೆ ಕರೆದುಕೊಂಡು ಹೋಗುವುದಿಲ್ಲ. ಇವರ ಜನ ಇವರಿಗೆ ಓಟು ಕೊಟ್ಟಿಲ್ಲವೆ? ಪರಿಹಾರ ಕೊಡುವುದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ನಾನು ಹೇಳುವುದಲ್ಲ, ಇವತ್ತು ಅನೇಕ ಕಡೆಗಳಲ್ಲಿ ಅದಕ್ಕೋಸ್ಕರವಾಗಿಯೇ ಚಳುವಳಿಗಳು ನಡೆಯುತ್ತಿವೆ. ಎಬಿವಿಪಿ ಯವರು ಚಳುವಳಿ ಮಾಡುತ್ತಿದ್ದಾರೆ, ಲೋಕಾಯುಕ್ತರವರ ವರದಿ ಇದೆ. ಅದಕ್ಕೆ ನಾನು, I demand, ಈ ಎಲ್ಲಾ ಹಿನ್ನೆಲೆಯಲ್ಲಿ ಯಾರ್ಯಾರಿಗೆ ಪರಿಹಾರ ಸಿಕ್ಕಿಲ್ಲ, ಎಲ್ಲಿ ಸರ್ವೆಯಾಗಿಲ್ಲ, ಎಲ್ಲಿ ಸಿಆರ್‌ಎಫ್ ನಾರ್ಮ್ಸ್ ಪ್ರಕಾರ ಸೆಂಟ್ರಲ್ ನಾರ್ಮ್ಸ್ ಪ್ರಕಾರ ಅವರಿಗೆ ಪರಿಹಾರ ಸಿಕ್ಕಿಲ್ಲ, ಅದಕ್ಕೋಸ್ಕರವಾಗಿ ಮತ್ತೆ ರಿಸರ್ವೆ ಮಾಡಿಸುವುದು ಅಗತ್ಯ.

ಎಲ್ಲೆಲ್ಲಿ ಅನ್ಯಾಯವಾಗಿದೆ ಮತ್ತೆ ಎಲ್ಲೆಲ್ಲಿ ದೂರುಗಳು ಬಂದಿವೆಯೋ ಅಂಥ ಕಡೆ ಎಲ್ಲಾ re-survey ಮಾಡಬೇಕು. ಇದರಲ್ಲಿ ಶಾಮೀಲಾಗಿರುವ ಅಧಿಕಾರಿಗಳು ಮತ್ತು ಯಾರ್ಯಾರು ಈ ಒಂದು ಭ್ರಷ್ಟಾಚಾರದಲ್ಲಿ ತೊಡಗಿದ್ದವರ ಬಗ್ಗೆ ಮತ್ತು ಅವರ ಕೆಲಸದಲ್ಲಿ ನಿರ್ಲಕ್ಷ್ಯತನ ಮಾಡಿದ್ದಂತವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಯಾರು ನಿಜವಾದ ಸಂತ್ರಸ್ತರು ಇದ್ದಾರೆಯೋ ಅಂದರೆ, ಯಾರಿಗೆ ಪಕಾ ಮನೆ ಹೋಗಿದೆಯೋ ಅವರು ಯಾವುದೇ ಪಕ್ಷದವರಾಗಿದ್ದರೂ ಸಹ ಅವರಿಗೆಲ್ಲಾ ಪರಿಹಾರ ಸಿಗಬೇಕು ಮತ್ತೆ ಬೆಳೆ ಕಳೆದುಕೊಂಡಿರುವವರಿಗೆ ಹಾಗೂ ಜಮೀನು ಹಾಳಾಗಿರುವವರಿಗೆ ಪರಿಹಾರ ಸಿಗಬೇಕು. ಮತ್ತೆ ದನಗಳು, ಎಮ್ಮೆಗಳು, ಕುರಿಗಳನ್ನು ಕಳೆದುಕೊಂಡಿರುವವರಿಗೂ ಸಹ ಪರಿಹಾರ ಸಿಗಬೇಕು. ಮತ್ತೆ ನೇಕಾರರು, ಸಣ್ಣ, ಗುಡಿ ಕೈಗಾರಿಕೆ ಮಾಡುವವರ ವಸ್ತುಗಳು ಕೂಡ ನಾಶವಾಗಿವೆ. ಮತ್ತೆ ಇನ್ನೊಂದು ವಿಷಯ ಏನೆಂದರೆ, ಹಳ್ಳಿಗಳಲ್ಲಿ ಮನೆಗಳಲ್ಲಿ ಹಗೇವು ತೆಗೆದು ಅಲ್ಲಿ ಜೋಳ, ರಾಗಿ, ಕಾಳು ಮತ್ತು ಇತರೇ ಆಹಾರ ಪದಾರ್ಥಗಳನ್ನು ಇಟ್ಟಿರುತ್ತಾರೆ. ಇದರಲ್ಲಿ ಎಷ್ಟು ನಷ್ಟವಾಗಿದೆ ಎಂದು ಸರ್ವೆ ಮಾಡಿಲ್ಲ. ಮನೆಗಳು ಸಂಪೂರ್ಣವಾಗಿ ಕುಸಿದು ಬಿದ್ದು ಹೋದಮೇಲೆ ಅದು ಎಲ್ಲಿ ಸಿಗುತ್ತದೆ? ಅದಕ್ಕೆ ಒಂದು ರೂಪಾಯಿ ಪರಿಹಾರ ಸಹ ಕೊಟ್ಟಿಲ್ಲ. ಹಗೇವಿನಲ್ಲಿರತಕ್ಕಂಥ ಪದಾರ್ಥಗಳನ್ನು ಯಾವ ರೀತಿಯಾಗಿ ಲೆಕ್ಕ ಹಾಕುವುದಕ್ಕೆ ಆಗುತ್ತದೆಂದು ಹೇಳುತ್ತಿದ್ದಾರೆ. ನಾವು ರೈತರ ಪರವಾಗಿ ಇದ್ದೇವೆಂದು ರೈತರ ಮೇಲೆ ಪ್ರಮಾಣ ಮಾಡಿ ಬಂದು ರೈತರು ಬೆಳೆದಂಥ ಪದಾರ್ಥಗಳು ಹಾಳಾದರೆ ಅವರು ಪುನಃ ಜೀವನವನ್ನು ಹೇಗೆ ಮಾಡುವುದಕ್ಕೆ ಆಗುತ್ತದೆ? ಅವರಿಗೆ ಬದುಕುವುದಕ್ಕೆ ಮತ್ತು ಊಟಕ್ಕೆ ಏನು ಮಾಡಬೇಕು? ನಾವು ನೀವು ಕೊಡುವಂಥ ಪರಿಹಾರ ಅವರಿಗೆ ಎಲ್ಲಿಯವರೆಗೆ ಬರುತ್ತದೆ? ಅವರ ಪದಾರ್ಥಗಳು ನಷ್ಟವಾಗಿರುವುದಕ್ಕಾದರೂ ಪರಿಹಾರ ಕೊಡಬೇಕಲ್ಲವೆ? ಆದ್ದರಿಂದ, ಎಲ್ಲೆಲ್ಲಿ ಹಗೇವಿನಲ್ಲಿ ಆಹಾರ ಧಾನ್ಯಗಳು ನಷ್ಟವಾಗಿವೆಯೋ ಅದರ ಬಗ್ಗೆ ಸರ್ವೆ ಮಾಡಿಸಿ ನಷ್ಟಕ್ಕೆ ಪರಿಹಾರ ಕೊಡುವಂಥ ಕೆಲಸ ಮಾಡಬೇಕು. ಮತ್ತೊಮ್ಮೆ ಎಲ್ಲವನ್ನು ಸರ್ವೆ ಮಾಡಿಸಿ ಪರಿಹಾರ ಕೊಡಿಸುವಂಥ ಕೆಲಸ ಆಗಬೇಕು. ಮುಂಗಾರು ಬೆಳೆ ಹಾಳಾಗಿದೆ ಮತ್ತೆ ಹಿಂಗಾರು ಬೆಳೆಯನ್ನು ಕೂಡ ಅನೇಕ ಕಡೆ ಇನ್ನು ಬಿತ್ತನೆ ಮಾಡುವುದಕ್ಕೆ ಆಗಿಲ್ಲ. 22 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾಳಾಗಿದೆ ಎಂದು ತಾವೇ ಹೇಳಿದ್ದೀರಿ. ಮತ್ತೆ ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ

ತೋಟಗಾರಿಕೆ ಬೆಳೆ ಹಾಳಾಗಿದೆ ಎಂದು ಹೇಳಿದ್ದೀರಿ. ಸುಮಾರು 23 ರಿಂದ 24 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ. ರೈತರು ಕ್ರಾಪ್ ಮೇಲೆ ತೆಗೆದುಕೊಂಡಿರುವ ಲೋನ್ ಬಗ್ಗೆ ತಾವು ಕೂಡ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೀರಿ. ನಾವು ಕೂಡ ನಿಯೋಗ ಹೋಗಿದ್ದಾಗ ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಒತ್ತಾಯ ಮಾಡಿದ್ದೇವೆ. ಮತ್ತೆ ಇಂದಿರಾ ಅವಾಸ್ ಯೋಜನೆಯಲ್ಲಿ 2 ಲಕ್ಷ ಮನೆಗಳನ್ನು ಕಟ್ಟಿಸಿಕೊಡಬೇಕೆಂದೂ ಸಹ ನಾವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ನೀವು ಏನೇನು ಒತ್ತಾಯ ಮಾಡಿದ್ದೀರೋ ಅವೆಲ್ಲದಕ್ಕೂ ಕೂಡ ನಾವು ಸಹ ಒತ್ತಾಯ ಮಾಡಿದ್ದೇವೆ. ಬೇಕಾದರೆ ಇನ್ನೊಂದು ಸಾರಿ ಒತ್ತಾಯ ಮಾಡೋಣ. ರೈತರ ಸಾಲ ಮನ್ನಾ ಮಾಡುವಂಥದ್ದು ಮತ್ತು ಪರಿಹಾರವನ್ನು ಸರಿಯಾದ ರೀತಿಯಲ್ಲಿ ಹಂಚತಕ್ಕಂಥದ್ದನ್ನು ನಾರಮ್ಸ್‌ಗೆ confine ಆಗಿ ಕೊಡಬೇಕೆಂದು ಕಾನೂನು ಗಳೇನು ಇಲ್ಲ. ಎಲ್ಲಿ ಹೆಚ್ಚಾಗಿ ನಷ್ಟವಾಗಿದೆಯೋ ಅಂಥ ಕಡೆ ನಿಮ್ಮ ರಾಜ್ಯದ ಖಜಾನೆಯಿಂದ, ನಿಮ್ಮ ಸಂಪನ್ಮೂಲಗಳಿಂದ ಕೊಡತಕ್ಕಂಥದ್ದನ್ನು ಮಾಡಬೇಕು. ಇದರ ಜೊತೆಗೆ ಇಷ್ಟೆಲ್ಲಾ irregularities, ಭ್ರಷ್ಟಾಚಾರವಾಗಿರುವುದರಿಂದ ಇದರ ಬಗ್ಗೆ ಮತ್ತೆ ಸರ್ವೆ ಮಾಡುವುದರ ಜೊತೆಗೆ ಎರಡು ಸದನದ ಸದ್ಯರನ್ನೊಳಗೊಂಡ ಒಂದು ಸದನ ಸಮಿತಿಯನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಒಂದು ಸದನ ಸಮಿತಿ ಮಾಡಿ ಎಲ್ಲೆಲ್ಲಿ ಏನೇನು ಆಗಿದೆ ಎಂಬುದರ ಬಗ್ಗೆ ಸದನ ಸಮಿತಿಯ ಸದಸ್ಯರು ಅಲ್ಲಿಗೆ ಹೋಗಿ ನೋಡಿ ಅನ್ಯಾಯವಾಗಿರುವ ಕಡೆ ಸರಿಪಡಿಸುವಂಥ ಕೆಲಸವನ್ನು ಮಾಡಲೇ ಬೇಕಾಗುತ್ತದೆ. ಇಲ್ಲದಿದ್ದರೆ ನಿಮಗೆ ಯಾರಿಗೆ ಬೇಕಾಗಿದೆಯೋ ಅವರಿಗೆ ಮಾತ್ರ ಸಿಗುತ್ತದೆ ಮತ್ತೆ ನೀವು ಯಾರಿಗೆ ಬೇಡವೆಂದು ಹೇಳುತ್ತೀರೋ ಅವರಿಗೆ ಸಿಗುವುದಿಲ್ಲ. ಆಗ ಅನ್ಯಾಯವಾಗುತ್ತದೆ. ಆದ್ದರಿಂದ, ಸದನ ಸಮಿತಿ ಮಾಡಬೇಕೆಂದು ನಾನು ಸರ್ಕಾರವನ್ನು ತೀವ್ರವಾಗಿ ಒತ್ತಾಯ ಮಾಡುತ್ತೇನೆ. ಇದಕ್ಕೆ ಸರ್ಕಾರ ಒಪ್ಪಿಕೊಳ್ಳುತ್ತದೆಂಬ ವಿಶ್ವಾಸ ನನಗೆ ಇದೆ. ಸದನ ಸಮಿತಿಯನ್ನು ಮಾಡಿ. ಮತ್ತೆ ಲೋಕಾಯುಕ್ತರವರು ಇದರ ಬಗ್ಗೆ ಒಂದು ವರದಿ ಕೊಟ್ಟಿದ್ದಾರೆ. ಮತ್ತೆ ನಾವೆಲ್ಲರೂ ಹೋಗಿ ನೋಡಿಕೊಂಡು ಬಂದು ಹೇಳಿದ್ದೇವೆ. ಮತ್ತೆ ಈ

ಸದನದ ಅನೇಕ ಜನ ಸದಸ್ಯರು ಅವರವರ ಕ್ಷೇತ್ರದಲ್ಲಿ ಆಗಿರುವಂಥ ಕೆಲಸಗಳ ಬಗ್ಗೆ ಹೇಳುತ್ತಾರೆ. ಮತ್ತೆ ನೀವೂ ಸಹ ಹೋಗಿ ನೋಡಿಕೊಂಡು ಬಂದಿದ್ದೀರಿ. ಬಹಳಷ್ಟು ಕೆಲಸ ಆಗಿರುವ ಬಗ್ಗೆ ವರದಿ ಕೂಡ ನಿಮ್ಮಲ್ಲಿ ಮಾಡಿದ್ದಾರೆ. ಬರದಿಂದ ಕೋಲಾರ, ತುಮಕೂರು, ಮಂಡ್ಯ, ಚಾಮರಾಜ ನಗರ, ಮೈಸೂರು, ಹಾಸನ ಜಿಲ್ಲೆಗಳಲ್ಲಿ ಇನ್ನು ಬಿತ್ತನೆ ಮಾಡಿಲ್ಲ. ಹಾನಿಗೆ ಒಳಗಾದ ಬೆಳೆಗಳಿಗೆ ಸರ್ಕಾರದಿಂದ ಎಷ್ಟು ಮೊತ್ತವನ್ನು ಪರಿಹಾರವಾಗಿ ನೀಡಲಾಗಿದೆ ಎಂಬ ಪ್ರಶ್ನೆಗೆ ಬರಪರಿಹಾರಕ್ಕೆ ಬಿಡುಗಡೆಯಾಗಿರುವ ಮೊತ್ತ ಕಡಿಮೆ ಇದ್ದುದ್ದರಿಂದ ಬೆಳೆ ಹಾನಿಗೆ ಪರಿಹಾರ ನೀಡಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ರೈತರಿಗೆ ಈ ರೀತಿಯಾಗಿ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಾಕುವುದಕ್ಕೆ ಆಗುವುದಿಲ್ಲ. ನಷ್ಟಕ್ಕೆ ಒಳಗಾಗಿರುವಂಥ ಎಲ್ಲಾ ರೈತರಿಗೂ ಕೂಡ ಪರಿಹಾರ ಕೊಡಬೇಕು. Other wise, ನಮ್ಮದು ರೈತರ ಸರ್ಕಾರ ಎಂದು ಹೇಳಿಕೊಳ್ಳುವುದಕ್ಕೆ ನಿಮಗೆ ಯಾವ ಹಕ್ಕು ಇರುವುದಿಲ್ಲ. ಈಗಾಗಲೇ ಎಲ್ಲವನ್ನು ಕಳೆದುಕೊಂಡಿದ್ದೀರಿ, You have no right at all. ಇದು ರೈತರ ಸರ್ಕಾರ ಅಲ್ಲವೇ ಅಲ್ಲ. ಆದ್ದರಿಂದ, ಇದರ ಬಗ್ಗೆ ಪರಿಶೀಲನೆ ಮಾಡಲು ಸದನ ಸಮಿತಿ ರಚನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ಈ ವಿಷಯದ ಬಗ್ಗೆ ಇನ್ನು ಅನೇಕ ಜನ ಸದಸ್ಯರು ಮಾತನಾಡುವುದರಿಂದ ನಾನು ಎಲ್ಲಾ ವಿಷಯವನ್ನು ಹೇಳುವುದಕ್ಕೆ ಹೋಗಿಲ್ಲ. ಬೇರೆ ಬೇರೆ ಜಿಲ್ಲೆಯ ಸದಸ್ಯರು ಇನ್ನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ. ಇದು National calamity ಆಗಿರುವುದರಿಂದ ಇದೊಂದು ರಾಷ್ಟ್ರೀಯ ದುರಂತವೆಂದು ಮಾನ್ಯ ಪ್ರಧಾನ ಮಂತ್ರಿಗಳು ಸಹ ಹೇಳಿದ್ದಾರೆ. ರಾಷ್ಟ್ರೀಯ ದುರಂತವೆಂದು ನೀವು ಕೂಡ ಒಪ್ಪಿಕೊಂಡಿರುವುದರಿಂದ ಈ ಒಂದು ರಾಷ್ಟ್ರೀಯ ದುರಂತದಲ್ಲಿ ರಾಜಕೀಯ ಬೆರೆಸದೆ ಜನರ ಕಷ್ಟಕ್ಕೆ ಸರ್ಕಾರ ಧಾವಿಸಿ ಅವರಿಗೆ ಪರಿಹಾರ ಸಿಗುವಂತೆ ನೋಡಿಕೊಳ್ಳಬೇಕೆಂದು, ಇದರ ಬಗ್ಗೆ ಸದನ ಸಮಿತಿ ಮಾಡಬೇಕೆಂದು ಹಾಗೂ ಮತ್ತೊಮ್ಮೆ ಸರ್ವೆ ಮಾಡಿಸ ಬೇಕೆಂದು ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ(ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ಈ ಒಂದು ನೆರೆ ಪ್ರವಾಹದ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮೊದಲನೆಯದಾಗಿ ವಂದಿಸುತ್ತೇನೆ. ಕರ್ನಾಟಕ

ರಾಜ್ಯದಲ್ಲಿ ಎಂದೂ ಕೂಡ ಕಂಡರಿಯದಂಥ ಈ ಒಂದು ಜಲ ಪ್ರಳಯವನ್ನು ನಾವೆಲ್ಲಾ ನೋಡಿದ್ದೇವೆಂದು ಈ ಸಂದರ್ಭದಲ್ಲಿ ನಾವು ಹೇಳಬೇಕಾಗುತ್ತದೆ. ಆ ಒಂದು ಸಂದರ್ಭದಲ್ಲಿ ಸುಮಾರು 15 ಜಿಲ್ಲೆಗಳಲ್ಲಿ ಈ ಒಂದು ಪ್ರವಾಹವನ್ನು ನಾವೆಲ್ಲಾ ನೋಡಿದ್ದೇವೆ. ಪ್ರಾರಂಭದ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾದಂಥ ಮಾನ್ಯ ಸಿದ್ದರಾಮಯ್ಯನವರು ಹೇಳಿದ ಹಾಗೆ, ರಾಜ್ಯದಲ್ಲಿ ಮಳೆ ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾದಾಗ ತಕ್ಷಣ ಸ್ಪಂದಿಸುವಂಥ ಕೆಲಸ ಮಾನ್ಯ ಮುಖ್ಯಮಂತ್ರಿಯವರಿಂದ ಆಗಲಿಲ್ಲ. 2–3 ದಿವಸ ಕಳೆದ ನಂತರ ಸರ್ಕಾರ ಇದೆ ನಿಮಗೆಲ್ಲಾ ರಕ್ಷಣೆ ಕೊಡುತ್ತೇವೆಂದು ರಕ್ಷಣೆ ಕಾರ್ಯವನ್ನು ಪ್ರಾರಂಭ ಮಾಡಿದರು. ಆನಂತರ ಒಂದು ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ವಿಶ್ರಾಂತಿಯನ್ನು ಸಹ ತೆಗೆದುಕೊಳ್ಳದೆ ಕೆಲವು ದಿವಸ ಕೆಲಸ ಮಾಡಿದ್ದಾರೆ. ಅದರ ಬಗ್ಗೆ ನಾವೇನು ಯಾವುದೇ ಒಂದು ಟೀಕೆಯನ್ನು ಮಾಡುತ್ತಿಲ್ಲ. ಆದರೆ, ತಕ್ಷಣದಲ್ಲಿ ಈ ಕೆಲಸವನ್ನು ಅವರು ಪ್ರಾರಂಭ ಮಾಡಲಿಲ್ಲ. ಮೈಸೂರಿನಲ್ಲಿ ಒಂದು ಬೈಠಕ್ ಸಭೆಯನ್ನು ನಡೆಸಿ ಪಕ್ಷವನ್ನು ಯಾವ ರೀತಿಯಾಗಿ ನಡೆಸಬೇಕೆಂದು ಮತ್ತು ಈ ಸರ್ಕಾರವನ್ನು ಒಂದು ಮಾದರಿ ಸರ್ಕಾರವನ್ನಾಗಿ ಮಾಡಬೇಕೆಂದು ಬೈಠಕ್ ಸಭೆ ಮಾಡಿದರು. ಆದರೆ, ಜನರ ಸಂಕಷ್ಟಕ್ಕೆ ಸಂಬಂಧಪಟ್ಟಂಥ ನೆರವಿಗೆ ಅವರು ನೇರವಾಗಿ ಆ ಸಂದರ್ಭದಲ್ಲಿ ಬರಲಿಲ್ಲ ಎನ್ನತಕ್ಕಂಥದ್ದು ಸಾಮಾನ್ಯ ಜನರ ಕೂಗಾಗಿದೆ. ಈಗ ಪರಿಹಾರ ಕೊಡತಕ್ಕಂಥದ್ದರ ಬಗ್ಗೆ ನಾವು ವೀಕ್ಷಣೆ ಮಾಡಿದಾಗ ಎನ್‌ಸಿಸಿಎಫ್ ಅಥವಾ ಕೇಂದ್ರದಿಂದ ಅತಿವೃಷ್ಟಿಗಾಗಿ ಬಂದಿರುವಂಥ ಹಣವನ್ನು ಗೈಡ್‌ಲೈನ್ಸ್ ಪ್ರಕಾರ ಹಂಚಿಕೆ ಮಾಡಿದ್ದೇವೆಂದು ಅವರು ಹೇಳುತ್ತಾರೆ. ಮತ್ತೆ ಸಿಆರ್‌ಎಫ್ ನಾರಮ್ಸ್ ಪ್ರಕಾರ ಕೊಟ್ಟಿದ್ದೇವೆಂದು ಅವರು ಹೇಳಬಹುದು. ಆದರೆ, ಅಲ್ಲಿ ಆಗಿರುವಂಥ ಹಾನಿಯ ವಿವರಣೆಯನ್ನು ನೋಡಿದಾಗ ಇಲ್ಲಿ ಯಾವುದೇ ಒಂದು ಸ್ಪಷ್ಟತೆಯನ್ನು ನಾವು ಕಾಣುತ್ತಿಲ್ಲ. ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯಲ್ಲಿ ಪರಿಹಾರವನ್ನು ಕೊಟ್ಟಿದ್ದಾರೆ.

(1-00 PM)

ಇವತ್ತು ನಾವು ಗದಗ ಜಿಲ್ಲೆಯನ್ನು ತೆಗೆದುಕೊಂಡಾಗ ಸಾರಾಸಗಟಾಗಿ ಪರಿಹಾರವನ್ನು ಕೊಟ್ಟಿದ್ದಾರೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯನ್ನು ತೆಗೆದುಕೊಂಡರೆ, ಅಲ್ಲಿಯ ಜಿಲ್ಲಾಧಿಕಾರಿಗಳು ಏನು ವರದಿ ಯನ್ನು ಕಳುಹಿಸಿದ್ದಾರೆ ಅದರ ಪ್ರಕಾರ ಪರಿಹಾರವನ್ನು ಕೊಡತಕ್ಕಂಥದ್ದನ್ನು

ಮಾಡಿದ್ದಾರೆ. ಇಲ್ಲಿ ಸಂಪೂರ್ಣವಾಗಿ ಬಿದ್ದಿರತಕ್ಕಂಥ ಮನೆಗಳ ಬಗ್ಗೆ ನಾವು ಮಾತನಾಡುವುದಾದರೆ ರೂಫ್ ಬಿದ್ದಿರತಕ್ಕಂಥ ಮನೆಗಳಿಗೆ ಸುಮಾರು 37,000 ರೂ.ಗಳ ಹಣ ಕೊಡಬೇಕೆಂದು ಹೇಳಿ ನಾರ್ಮ್ಸ್ ಇದೆ. ಅದನ್ನು ಅವರು ಇಲ್ಲಿ ಅನ್ವಯಿಸತಕ್ಕಂಥ ಕೆಲಸವನ್ನು ಮಾಡಿಲ್ಲ. ಅಲ್ಲಿ ಏನು ಮಾಡಿದ್ದಾರೆಂದರೆ, ಒಬ್ಬ ಇಂಜಿನಿಯರ್ ಸರ್ವೆ ಮಾಡಿದ್ದಾರೆ, ಅವರ ವರದಿಯ ಮೇಲೆ ಪರಿಹಾರವನ್ನು ಕೊಡತಕ್ಕಂಥದ್ದನ್ನು ಮಾಡಿದ್ದಾರೆ. ಆ ಇಂಜಿನಿಯರುಗಳು ಸಂಪೂರ್ಣವಾಗಿ ಬಿದ್ದ ಮನೆಗಳ ಸರ್ವೆ ಮಾಡುವುದರಲ್ಲಿ ಎಡವಿದ್ದಾರೆ. ಆ ಕೆಲಸವನ್ನು ಅವರು ಸರಿಯಾಗಿ ಮಾಡಿಲ್ಲವೆಂದು ಎಲ್ಲಾ ಫಲಾನುಭವಿಗಳ ಮತ್ತು ಜನರ ಹಾಗೂ ಜನ ಪ್ರತಿನಿಧಿಗಳಿಗೆ ಗೊತ್ತಾಗಿರತಕ್ಕಂಥ ಒಂದು ವಿಚಾರ. ಹಾಗಾಗಿ ಸರ್ಕಾರಕ್ಕೆ ನಾವು ಏನು ಒತ್ತಾಯ ಮಾಡುತ್ತೇವೆಂದರೆ, ಇವತ್ತು ಸಂಪೂರ್ಣವಾಗಿ ಬಿದ್ದಿರತಕ್ಕಂಥ ಮನೆಗಳಿಗೆ ನಾರ್ಮ್ಸ್ ಪ್ರಕಾರ ಪರಿಹಾರದ ಹಣವನ್ನು ನೀವು ಕೊಡಬೇಕಾಗುತ್ತದೆ. ಅಲ್ಲಿ ಒಬ್ಬ ಇಂಜಿನಿಯರ್ ಅಥವಾ ಒಂದು ತನಿಖಾ ತಂಡವನ್ನು ಬಿಟ್ಟಿದ್ದೀರಿ, ಅವರು ಸರಿಯಾಗಿ ವರದಿಯನ್ನು ಮಾಡಿಲ್ಲವೆನ್ನುವಂಥ ಒಂದು ಆಪಾದನೆಯನ್ನು ಮಾಡುವುದಕ್ಕೆ ನಾನು ಬಯಸುತ್ತೇನೆ. ಆ ಕಾರಣಕ್ಕಾಗಿ ಅದನ್ನು ಮರು ಸರ್ವೆ ಮಾಡುವುದಕ್ಕೆ ಸಾಧ್ಯವಿದೆಯೆ ಎನ್ನುವುದನ್ನು ತಾವು ಈ ಸದನಕ್ಕೆ ಹೇಳಬೇಕಾಗುತ್ತದೆ. ಬೆಳೆ ಪರಿಹಾರದ ವಿಚಾರದಲ್ಲಿಯೂ ಕೂಡ ಸಂಪೂರ್ಣವಾದ ಸರ್ವೆ ಕಾರ್ಯವಾಗಿಲ್ಲ. ಅಧಿಕಾರಿಗಳು ಬಹಳಷ್ಟು ಕಡೆ ಜಿಲ್ಲಾ ಮಂತ್ರಿಗಳು ಒಂದು ಆದೇಶವನ್ನು ಕೊಟ್ಟರು ಕೂಡ ಸರಿಯಾಗಿ ಕಾರ್ಯವನ್ನು ನಿರ್ವಹಿಸಿಲ್ಲ. ಅಲ್ಲಿರುವ ಖುಷ್ಕಿ ಜಮೀನಿಗೆ ಒಂದು ಹೆಕ್ಟೇರ್‌ಗೆ 2000 ರೂ.ಗಳನ್ನು ಕೊಡಬೇಕು. ನೀರಾವರಿಗೆ 4000 ರೂ.ಗಳನ್ನು ಕೊಡಬೇಕು. ತೋಟಗಾರಿಕೆಯ ಬೆಳೆ ಹಾನಿಗೆ 6000 ರೂ.ಗಳನ್ನು ಕೊಡಬೇಕು ಎನ್ನುವ ಸರ್ಕಾರದ ಗೈಡ್‌ಲೈನ್ಸ್ ಇದ್ದರೂ ಕೂಡ ಸರ್ವೆಯಾದಂಥ ವರದಿಯನ್ನು ಅವರು ಸಂಗ್ರಹ ಮಾಡಿಲ್ಲ. ಹಾಗಾಗಿ ಎಲ್ಲಾ ಕಡೆಯ ರೈತರು ಏನು ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆಂದರೆ, ಸರಿಯಾಗಿ ಸರ್ವೆ ಆಗಿಲ್ಲ, ನಮಗೆ ಬರಬೇಕಾದ ಬೆಳೆ ಪರಿಹಾರದ ಮೊತ್ತ ಸಂಪೂರ್ಣವಾಗಿ ಬಂದಿಲ್ಲವೆನ್ನುವಂಥ ಮಾತು ಎಲ್ಲಾ ಕಡೆ ಇವತ್ತು ನಿರ್ಮಾಣವಾಗಿದೆ. ಹಾಗಾಗಿ 15 ಜಿಲ್ಲೆಗೆ ಸಂಬಂಧಪಟ್ಟಂಥ ಜಿಲ್ಲಾ ಮಂತ್ರಿಗಳು ಇರಬಹುದು, ಮಾನ್ಯ ಕಂದಾಯ ಮಂತ್ರಿಗಳು ಕೂಡ ಅದನ್ನು ಮತ್ತೊಂದು ಸಲ ಸರ್ವೆ ಮಾಡಿಸುವ

ಪ್ರಯತ್ನವನ್ನು ಮಾಡಬೇಕಾಗುತ್ತದೆ. ಏಕೆಂದರೆ, ಕೆಲವು ರೈತರಿಗೆ ಹೆಚ್ಚು ಹಣ ಸಿಕ್ಕಿದೆ, ಹಾನಿಯಾದ ಕೆಲವು ಕಡೆಯ ರೈತರಿಗೆ ಕಡಿಮೆ ಹಣದ ಪರಿಹಾರ ಒದಗಿಸಿರುವುದರಿಂದ ಇದು ತಾರತಮ್ಯವಾಗಿದೆಯೋ ಅಥವಾ ಸರ್ಕಾರಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಆಗಿದೆಯೋ ಎನ್ನುವುದರ ಬಗ್ಗೆ ತಿಳಿದು ಕೊಂಡು ಅದನ್ನು ಒಂದು ಚೌಕಟ್ಟಿನಲ್ಲಿ ತೆಗೆದುಕೊಂಡು ಬರಬೇಕೆಂದು ಹೇಳಿ ನಾನು ಒತ್ತಾಯವನ್ನು ಮಾಡುತ್ತೇನೆ. ಜಮೀನಿನ ಮಣ್ಣು ಕೊಚ್ಚಿಕೊಂಡು ಹೋಗಿರತಕ್ಕಂಥದ್ದನ್ನು ಅದಕ್ಕೆ ಮಣ್ಣನ್ನು ರೀಫಿಲಪ್ ಮಾಡಬೇಕಾಗುತ್ತದೆ. ಅದರ ಬಗ್ಗೆ ಕೂಡ ಇವತ್ತು ಸರ್ವೆ ಕಾರ್ಯವನ್ನು ಮಾಡಿಲ್ಲ. ಎಲ್ಲಾ ಕಡೆ ನಾಲೆಗಳು ಸಮಪಾತಳಿಗೆ ಬಂದು ಬಿಟ್ಟಿವೆ. ನಾಲೆಯ ಹಿಂದೆ ಇರುವ ತಗ್ಗು ಪ್ರದೇಶ ಕೂಡ ಸಂಪೂರ್ಣವಾಗಿ ಇವತ್ತು ಮುಚ್ಚಿ ಹೋಗಿದೆ. ನಾಲೆಯ ರೀಸಿಲ್ಟಿಂಗ್ ಮಾಡುವಂಥ ಕೆಲಸವನ್ನು ಸರ್ಕಾರ ಚಿಂತನೆ ಮಾಡಬೇಕಾ ಗುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ನಾಲೆಯ ರೀಸಿಲ್ಟಿಂಗ್ ಮಾಡುವ ಸಲುವಾಗಿ ಒಂದು ಹೊಸ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅದು ಕಂಪ್ಲೀಟ್ ಸಿಲ್ಟಪ್ ಆಗಿರುವುದರಿಂದ ನಾಲೆಯ ಬದಿಯಲ್ಲಿ ರುವಂಥ ಎಲ್ಲಾ ಬೆಳೆಗಳು ಸರ್ವನಾಶವಾಗಿ ಹೋಗುತ್ತಿವೆ. ವಿಶೇಷವಾಗಿ ಅದೊಂದು ಪೈಲೆಟ್ ಪ್ರಾಜೆಕ್ಟ್ ಆಗಿ ಕೈಗೆತ್ತಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದು ಅಲ್ಲದೆ ಇವತ್ತು ಪರಿಹಾರದ ಬಗ್ಗೆ ಅನೇಕ ಗ್ರಾಮಗಳನ್ನು ಸಕಾರ ಈಗಾಗಲೇ 243 ಗ್ರಾಮಗಳನ್ನು ಮರು ಗ್ರಾಮಗಳಾಗಿ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಈಗಾಗಲೇ. ಕಂದಾಯ ಮಂತ್ರಿಗಳು ಮತ್ತು ರಾಜ್ಯದ ಮುಖ್ಯ ಮಂತ್ರಿಗಳು ಕೂಡ ಪೂಜೆಯ ಕಾರ್ಯಕ್ರಮವನ್ನು ಒಂದು ಪೈಪೋಟಿಯ ದೃಷ್ಟಿಯಿಂದ ನೆರವೇರಿಸಿದ್ದಾರೆ. ಅವರು ಹೇಳಿದ್ದಾರೆ, ಯಾವ್ಯಾವ ಜಿಲ್ಲೆಗಳಲ್ಲಿ ನವ ಗ್ರಾಮಗಳನ್ನು ನಿರ್ಮಾಣ ಮಾಡತಕ್ಕಂಥದ್ದರ ಬಗ್ಗೆ ಕೈಗಾರಿಕೋದ್ಯಮಿಗಳು ಇರಬಹುದು, ಮಠಮಾನ್ಯಗಳು ಇರಬಹುದು, ಸಂಘ ಸಂಸ್ಥೆಗಳವರು ಇರಬಹುದು. ಇಂತಿಂಥ ಕೆಲಸಗಳನ್ನು ಯಾರ್ಯಾರು ಮಾಡುತ್ತಾರೆಂದು ನೀವು ಸಲ್ಲಿಸಿರುವ ವರದಿಯಲ್ಲಿ ಒಪ್ಪಿಸಿದ್ದೀರಿ. 15 ಜಿಲ್ಲೆಗಳಲ್ಲಿರತಕ್ಕಂಥ ಒಂದು ಗ್ರಾಮದಲ್ಲಿ ಒಂದು ಮನೆ ಕೂಡ ನಿರ್ಮಾಣವಾಗಿಲ್ಲ. ನಾವು ಕನಿಷ್ಠ ಮೂರು ತಿಂಗಳ ಸಮಯವನ್ನು ಈಗಾಗಲೇ ಕಳೆದಿದ್ದೇವೆ. ಅಲ್ಲಿರುವಂಥ ಫಲಾನುಭವಿಗಳು ಏನು ಆಲೋಚನೆ ಮಾಡಿದ್ದಾರೆಂದರೆ, ಸರ್ಕಾರದವರು ಹೊಸ ಮನೆ ಕಟ್ಟಿ ಕೊಡುತ್ತಾರೆ. ನಾವಿ ಅಲ್ಲಿರುವ ಹೊಸ ಮನೆಗಳಲ್ಲಿ ಹೋಗಿ ಜೀವನ

ಮಾಡಬೇಕಾಗುತ್ತದೆಂದು ಹೇಳಿ, ಇದುವರೆಗೆ ಅವರ ಬಿದ್ದ ಮನೆಗಳನ್ನು ರೀಸ್ಟ್ರಕ್ಚರ್ ಮಾಡುವ ಕೆಲಸಕ್ಕೆ ಆ ಫಲಾನುಭವಿಗಳು ಹೋಗಿಲ್ಲ. ಹಾಗಾಗಿ ಮತ್ತೆ ಮಳೆ ಪ್ರಾರಂಭವಾದರೆ ಅವರ ಬದುಕು ಬಹಳ ದುಸ್ಥಿರವಾಗುತ್ತದೆ. ಸರ್ಕಾರ ಇವತ್ತು ಆಮೆ ವೇಗದಲ್ಲಿ ಕೆಲಸವನ್ನು ಮಾಡುತ್ತಿದೆ. ಅವರ ಬದುಕಿನ ಬಗ್ಗೆ ಸರ್ಕಾರಕ್ಕೆ ಒಂದು ಆಲೋಚನೆ ಇದ್ದರೆ ಅತ್ಯಂತ ತೀವ್ರಗತಿ ಯಲ್ಲಿ ನವಗ್ರಾಮಗಳನ್ನು ನಿರ್ಮಾಣ ಮಾಡುವುದಕ್ಕೆ ಮುಂದಾಗಬೇಕಾ ಗುತ್ತದೆ. ನವಗ್ರಾಮಗಳ ನಿರ್ಮಾಣ ಮಾಡುವ ಇವರ ನಿಯಮಾವಳಿಗಳನ್ನು ನೋಡಿದರೆ ಒಂದು ಗೊಂದಲಮಯವಾದ ವಾತಾವರಣ ಇದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 9 ಗ್ರಾಮಗಳನ್ನು ಶಿಫ್ಟ್ ಮಾಡುವ ಬಗ್ಗೆ ಸರ್ಕಾರ ಘೋಷಣೆಯನ್ನು ಮಾಡಿದೆ. ಉದಾಹರಣೆಗಾಗಿ ಹಿರೇಸಿಂದಗಿ ಎನ್ನುವ ಒಂದು ಗ್ರಾಮವನ್ನು ತೆಗೆದುಕೊಳ್ಳೋಣ. ಅಲ್ಲಿರುವಂಥ ಮನೆಗಳು ಸಂಪೂರ್ಣವಾಗಿ ನೆಲಕಚ್ಚಿವೆ. ಬಿದ್ದು ಕುಸಿದಿರುವಂಥ ಮನೆಗಳು ಆ ದೊಡ್ಡ ದೊಡ್ಡ ಮನೆಗಳಿಗೆ ಇವರಿಂದ ಆಗಿರುವ ಹಾನಿಯನ್ನು ಕೊಡುವುದಕ್ಕಾಗುತ್ತಿಲ್ಲ. ಇವತ್ತು ಆಶ್ರಯ ಎನ್ನುವ ಒಂದು ಯೋಜನೆಯ ಮೂಲಕ 30 x 40 ಸೈಟ್‌ನ್ನು ಕೊಡುತ್ತೇವೆ. ಅದರಲ್ಲಿ ಒಂದು ಲಕ್ಷ ರೂ.ಗಳಲ್ಲಿ ಒಂದು ಮನೆಯನ್ನು ಕಟ್ಟುತ್ತೇವೆ ಎನ್ನುವಂಥ ಒಂದು ಮಾತನ್ನು ಸರ್ಕಾರದವರು ಘೋಷಣೆ ಮಾಡಿದ್ದಾರೆ. ಆ ಗ್ರಾಮದಲ್ಲಿರತಕ್ಕಂಥ ಫಲಾನುಭವಿಗಳು 8 ರಿಂದ 10 ಲಕ್ಷ ರೂ.ಗಳ ಕಿಮ್ಮತ್ತಿನ ಒಂದು ಮನೆ ಇವತ್ತು ಹಾನಿಯಾಗಿದೆ, ನೀವು ಒಂದು ಲಕ್ಷ ರೂ.ಗಳನ್ನು ಖರ್ಚು ಮಾಡಿ ಕೊಡುವ ಆ ಸೈಟಿಗೆ ನಮ್ಮಿಂದ ಬರುವುದಕ್ಕಾಗುವು ದಿಲ್ಲವೆನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಪುನಃ ಅವರು ಆ ಸೈಟಿಗೆ ಬರದಿದ್ದಲ್ಲಿ ಮತ್ತೆ ಒಂದು ದಿನ ಮಳೆ ಪ್ರಾರಂಭವಾಗಿ ಫ್ಲಡ್ ಬರತಕ್ಕಂಥದ್ದು ನಿರ್ಮಾಣವಾದರೆ ಜೀವಹಾನಿ ಮತ್ತು ಆಸ್ತಿಪಾಸ್ತಿ ಹಾನಿಯಾಗುವ ಪರಿಸ್ಥಿತಿ ಮರುಕಳುಹಿಸುವಂಥ ಒಂದು ವಾತಾವರಣವಿದೆ. ಮಾನ್ಯ ಮುಖ್ಯಮಂತ್ರಿಗಳು, ಕಂದಾಯ ಮಂತ್ರಿಗಳು, ಜಿಲ್ಲಾ ಮಂತ್ರಿಗಳು ಮತ್ತೊಂದು ಸಭೆಯನ್ನು ಮಾಡಿ ಅಂತಹ ಫಲಾನುಭ ವಿಗಳು ಏನಿದ್ದಾರೆ, ಅವರಿಗೆ ನೀವು 2–3 ಲಕ್ಷ ರೂ.ಗಳ ಹೆಚ್ಚುವರಿಯಾಗಿ ಮಾಡಿ ಅವರಿಗೆ ಹೊಸ ಮನೆಗಳನ್ನು ಕಟ್ಟಿಸಿಕೊಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಅವರೆಲ್ಲರೂ ಕೂಡ ಸ್ಥಳಾಂತರವಾಗುವುದಕ್ಕೆ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಇಲ್ಲದಿದ್ದರೆ ಕೆಲವರು ಬಡವರು ಮಾತ್ರ, ಕಡಿಮೆ ಖರ್ಚು ಆಗಿ ನಾಶವಾಗಿರುವಂಥ ಮನೆಗಳವರು ಮಾತ್ರ ಆ ನವಗ್ರಾಮಕ್ಕೆ

ಹೋಗುತ್ತಾರೆ. ಆದರೆ ಆಸ್ತಿ ಇರುವಂಥ ಜನರು ಆ ಸ್ಥಳಕ್ಕೆ ಹೋಗುವುದಕ್ಕೆ ಮನಸ್ಸು ಮಾಡುತ್ತಿಲ್ಲ. ಆ ಕಾರಣಕ್ಕಾಗಿ ಆ ಒಂದು ವಿಚಾರದಲ್ಲಿ ತಾವು ಒಂದು ನಿರ್ಧಾರವನ್ನು ಮಾಡಬೇಕೆಂದು ಹೇಳಿ ತಮ್ಮಲ್ಲಿ ನಾನು ಒತ್ತಾಯ ವನ್ನು ಮಾಡುತ್ತೇನೆ. ಆ Shifted Villege ನಲ್ಲಿ ಬರತಕ್ಕಂಥ ಖಾಲಿ ಸೈಟ್‌ಗಳು ಏನಿವೆ, ಆ ಸೈಟ್‌ಗಳನ್ನು ನವಗ್ರಾಮದಲ್ಲಿಯೂ ಕೊಡಬೇಕೆನ್ನುವ ಒಂದು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಮುಂದೆ ಒಂದು ಪ್ರಶ್ನೆಯನ್ನು ಇಟ್ಟಾಗ ಮತ್ತು ಮಾನ್ಯ ಜಿಲ್ಲಾ ಮಂತ್ರಿಗಳ ಗಮನಕ್ಕೂ ತಂದಾಗ ಅವರು ಆ ಸೈಟ್‌ನ್ನು ಕೊಡುವುದಕ್ಕಾಗುವುದಿಲ್ಲವೆನ್ನುವ ಒಂದು ಮಾತನ್ನು ಹೇಳುತ್ತಾರೆ, ಇದು ಯಾವ ನ್ಯಾಯ? ನನಗೆ ಒಂದು ಅಲ್ಲಿ ಖಾಲಿ ಸೈಟ್ ಇದೆ. ಆ ಸೈಟಿನಲ್ಲಿ ನನಗೆ ಮನೆ ಕಟ್ಟುವುದಕ್ಕಾಗಿಲ್ಲ, ನನಗೆ ಬೇರೆ ಮನೆ ಕೂಡ ಇಲ್ಲ. ಆ ಸೈಟ್ ಕೊಡುವುದಿಲ್ಲ, ಮನೆ ಕಟ್ಟಿಸಿ ಕೊಡುವುದಿಲ್ಲವೆಂದರೆ ಹೇಗೆ? ಮಾನ್ಯ ಕಂದಾಯ ಮಂತ್ರಿಗಳು ಸೈಟ್ ಇರುವ ಫಲಾನುಭವಿಗಳಿಗೆ ಕೂಡ ಹೊಸ ಮನೆಗಳನ್ನು ಕೊಡಬೇಕೆನ್ನುವುದರ ಬಗ್ಗೆ ತಾವು ಪ್ರಾಮುಖ್ಯವಾದ ಈ ಮಾತನ್ನು ಗಮನಿಸುತ್ತೀರಿ ಎನ್ನುವಂಥದ್ದನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ. ಇವತ್ತು ಅನೇಕ ಜನ ರೈತರ ಪಂಪ್‌ಸೆಟ್ಟುಗಳು ಆ ಫ್ಲಡ್‌ನಲ್ಲಿ ನಾಶವಾಗಿವೆ. ರೈತರ ಪಂಪ್‌ಗಳು, ಪೈಪುಗಳು ಕೊಚ್ಚಿಕೊಂಡು ಹೋಗಿವೆ. ಬೋರ್‌ವೆಲ್‌ಗಳು ಸಾಯಿಲ್ ತುಂಬಿ ಹಾಳಾಗಿ ಹೋಗಿವೆ. ಅವರು ಏನು ಹೇಳುತ್ತಾರೆಂದರೆ, ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವ ಬಗ್ಗೆ ಖಡಾಖಂಡಿತವಾಗಿ ಹೇಳುತ್ತಾರೆ. ಆ ರೈತನ ಹೊಸ ಬದುಕನ್ನು ಕಟ್ಟಬೇಕಾದ ಈ ಸರ್ಕಾರ ನೀವು ನಿಮ್ಮ ನಿಯಮಾವಳಿಗಳನ್ನು ಹೇಳಿಕೊಂಡು ಕುಳಿತರೆ ಆ ರೈತನ ನೆರವಿಗೆ ಬರತಕ್ಕಂಥವರು ಯಾರು? ರಾಜ್ಯಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಆ ರೈತನ ಸಹಾಯಕ್ಕೆ ಬರದಿದ್ದರೆ ಇನ್ನು ಸಾಮಾನ್ಯ ಜನರ ಪಾಡೇನು ಎನ್ನುವುದನ್ನು ಕೂಡ ತಾವು ಗಮನಿಸಬೇಕಾಗುತ್ತದೆ.

ರಾಜ್ಯ ಸರ್ಕಾರದ ಆಡಳಿತವನ್ನು ಮಾಡತಕ್ಕಂಥ ಮುಖ್ಯಮಂತ್ರಿಗಳು ಬರದಿದ್ದರೆ ಸಾಮಾನ್ಯ ಜನರ ಪಾಡೇನು ಎಂಬುದನ್ನೂ ಕೂಡ ತಾವು ಗಮನಿಸಬೇಕಾಗುತ್ತದೆ. ಅನೇಕ ಪಂಪ್‌ಸೆಟ್, ಐ.ಪಿ.ಸೆಟ್‌ಗಳು ರೂಮುಗಳು ಕೊಲಾಪ್ಸ್ ಆಗಿವೆ. ಇವತ್ತು ಪೈಪ್ ಲೈನ್ಸ್ ಕಿತ್ತು ಹೋಗಿವೆ, ಇದಕ್ಕೆ ಪರಿಹಾರ ಕೊಡದಿದ್ದರೆ ಕಷ್ಟವಾಗುತ್ತದೆ, ಇದು ಬಹಳ ಗಂಭೀರವಾದಂಥ ಪ್ರಶ್ನೆಯಾಗಿದೆ. ಪಂಪ್‌ಸೆಟ್ ಕೊಚ್ಚಿಕೊಂಡು ಹೋಗಿವೆ, ಬೋರ್‌ವೆಲ್ಸ್ ಕೊಲಾಪ್ಸ್ ಆಗಿವೆ.

ಪೈಪ್‌ಲೈನ್ಸ್ ಹೋಗಿವೆ, ಇವ್ಯಾವುದಕ್ಕೂ ಕೂಡ ಪರಿಹಾರ ಇಲ್ಲವೆಂದು ಹೇಳುತ್ತಾರೆ. ಆ ಕಾರಣಕ್ಕಾಗಿ ಇದನ್ನು ಮರುಪರಿಶೀಲನೆ ಮಾಡಿ ಇದಕ್ಕೆ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರ ಮುಂದೆ ಬರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದರೊಂದಿಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಜಾನುವಾರುಗಳು ಇವತ್ತು ಅನೇಕ ಕಡೆ ನೀರಿನಲ್ಲಿ ತೇಲಿ ಹೋಗಿ ಅದರ dead body ಸಿಗದಿದ್ದ ಸಂದರ್ಭದಲ್ಲಿ ನಾವು P.M ಮಾಡಿದ ರಿಪೋರ್ಟ್ ಅನ್ನು ಕೊಡಲಿಕ್ಕಾಗುವುದಿಲ್ಲ. ಸ್ಥಳೀಯವಾಗಿ ಒಂದು ಮಹಜರು ಮಾಡಿಸಿ ಒಂದು ವರದಿಯನ್ನು ತರಿಸಿಕೊಂಡು ಆ ಒಂದು ಜಾನುವಾರು ಗಳಿಗೂ ಕೂಡ ಪರಿಹಾರವನ್ನು ಒದಗಿಸುವಂಥ ಕೆಲಸವನ್ನು ನೀವು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದಲ್ಲದೆ ಇವತ್ತು Flood affected ಆದಂಥ ಗ್ರಾಮಗಳಿವೆ, ನಮ್ಮ ಕೊಪ್ಪಳ ತಾಲ್ಲೂಕಿನ ಗ್ರಾಮಗಳ ಬಗ್ಗೆ ನಾನು ಮಾತನಾಡುವುದಾರೆ ಹಿರಿಯಳ ಅಣೆಕಟ್ಟಿನ ಕೆಳಗೆ ಬರತಕ್ಕಂಥ ಸುಮಾರು ಹಳ್ಳಿಗಳು ಬರುತ್ತಿವೆ. ಅಲ್ಲಿನ ರೈತರು ಎರಡು ಮೂರು ಸಾರಿ ಬೆಳೆ ಹಾನಿಗೆ ಒಳಗಾಗಿದ್ದಾರೆ, ಅದಕ್ಕೆ ಕಾರಣವೇನೆಂದರೆ ಹಿಂದೆ ಅಣೆಕಟ್ಟು ಇಲ್ಲದಂಥ ಸಂದರ್ಭದಲ್ಲಿ ನೀರು automatic ಆಗಿ flow ಆಗುತ್ತಿತ್ತು. ಆದರೆ ಇವತ್ತು ಹಿರಿಯಾಳ ಅಣೆಕಟ್ಟಿನ ಮೇಲೆ ಇರುವಂಥ ಹಲವಾರು ಗ್ರಾಮಗಳನ್ನು ಶಿಫ್ಟ್ ಮಾಡಿದಂಥ ನಮ್ಮ ಸರ್ಕಾರ ಇನ್ನು ಆ ಕಾರ್ಯಕ್ರಮಕ್ಕೆ ಮುಂದಾಗದಿದ್ದ ಸಂದರ್ಭದಲ್ಲಿ ಆ ಗ್ರಾಮದವರು ನಮ್ಮ ಗ್ರಾಮವು ಇದರಲ್ಲಿ ಮುಳುಗುತ್ತದೆಂದು ಹೇಳಿ, ಆ ಗೇಟನ್ನು ರೈತರು Pressure ಮಾಡಿ ಅಧಿಕಾರಿಗಳ ಮೂಲಕ ಆ ಗೇಟನ್ನು ಎತ್ತುವುದರಿಂದ ಕೆಳಗೆ ಇರುವ ಗ್ರಾಮಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಇವತ್ತು ಬೆಳೆ ಹಾನಿ ಆಗುತ್ತಿದೆ. ಅದಕ್ಕೆ ಇವತ್ತು ಸರ್ವೆ ಮಾಡಿ ಒಂದು ವರ್ಷದಲ್ಲಿ ಎರಡು ಮೂರು ಸಾರಿ ಬೆಳೆ ಹಾನಿಯಾದಾಗ ಏನು ರೈತ ಶ್ರಮ ವಹಿಸಿರುತ್ತಾನೆ. ಬೀಜ, ಗೊಬ್ಬರ ಹಾಕಿ ಶ್ರಮವಹಿಸಿ, ಖರ್ಚು ವೆಚ್ಚಗಳನ್ನು ಮಾಡಿದ್ದರೂ ಸಹಿತ ರೈತ ನಿರೀಕ್ಷಿಸಿದ ಮಟ್ಟದಲ್ಲಿ ಉತ್ಪಾದನೆ ಬರುತ್ತಿಲ್ಲ. ಆ ಕಾರಣಕ್ಕಾಗಿ ಅಲ್ಲಿನ ರೈತರು ಏನು ಒತ್ತಾಯ ಮಾಡುತ್ತಿದ್ದಾರೆಂದರೆ ಶಾಶ್ವತವಾದ ಪರಿಹಾರ ನಮಗೆ ಸಿಗಬೇಕು, ಪ್ರತಿವರ್ಷದಲ್ಲಿ ಎರಡೂ ಮೂರು ಸಾರಿ ಈ ಬೆಳೆ ಹಾನಿ ಆಗುವುದರಿಂದ ಸಂಪೂರ್ಣ ರೈತರು ಸಂಕಷ್ಟದಲ್ಲಿದ್ದಾರೆ, ಅವರ ನೆರವಿಗೆ ಬರಬೇಕಾದರೆ ಏನಾದರೂ ಪರಿಹಾರ ಸಿಗಬೇಕಾದರೆ ಶಾಶ್ವತವಾಗಿ ಅವರನ್ನು

ಆ ಪ್ರದೇಶವನ್ನು ಮುಳುಗಡೆ ಪ್ರದೇಶವೆಂದು ಘೋಷಣೆ ಮಾಡಿ ಅವರಿಗೆ ಪರಿಹಾರವನ್ನು ಕಲ್ಪಿಸಿಕೊಟ್ಟಾಗ ಮಾತ್ರ ಆ ಎಲ್ಲಾ ಗ್ರಾಮದ ರೈತರು ಉದ್ಧಾರವಾಗುತ್ತಾರೆ. ಇಲ್ಲದಿದ್ದಲ್ಲಿ ಇದೊಂದು ದೊಡ್ಡ ಜ್ವಲಂತ ಸಮಸ್ಯೆಯಾಗುತ್ತದೆ. ಇದಕ್ಕೆ ವಿಧಾನಸೌಧದ ಒಳಗೆ ಉತ್ತರ ಕೊಡದಿದ್ದಲ್ಲಿ ಎಲ್ಲಾ ರೈತರು ಅಲ್ಲಿ ಧರಣಿಯನ್ನು ಮಾಡುವಂಥ ವಾತಾವರಣ ನಿರ್ಮಾಣವಾಗಿದೆ. ಅಲ್ಲಿ ನೆರೆ ಹಾವಳಿಯಾದಂಥ ಸಂದರ್ಭದಲ್ಲಿ ಮಾನ್ಯ ಕಟ್ಟಾ ಸುಬ್ರಮಣ್ಯನಾಯ್ಡುರವರನ್ನು ಅಲ್ಲಿ ಉಸ್ತುವಾರಿ ಸಚಿವರನ್ನಾಗಿ ನಮ್ಮ ಜಿಲ್ಲೆಯಲ್ಲಿ ನೇಮಿಸಿದ್ದರು. ಇವತ್ತು ಅವರು ಈ ಕಡೆ ಗಮನಹರಿಸಬೇಕು. ಕಟ್ಟಾರವರು ಅಲ್ಲಿ ಅಂದು ಘೋಷಣೆ ಮಾಡಿದ್ದರು. ಮಾನ್ಯ ಕಟ್ಟಾರವರೇ, ನೀವು ನಮ್ಮ ಜಿಲ್ಲೆಯಲ್ಲಿ ನೆರೆ ಹಾವಳಿಯಾದಂಥ ಸಂದರ್ಭದಲ್ಲಿ ನಿಮಗೆ ಸರ್ಕಾರ ಉಸ್ತುವಾರಿ ವಹಿಸಿಕೊಟ್ಟಿದ್ದರು. ಅಲ್ಲಿ ತಾವು ಘೋಷಣೆಯನ್ನು ಮಾಡಿದ್ದಿರಿ. ಸುಮಾರು ಹಳ್ಳಿಗಳಲ್ಲಿ ಆ ನೆರೆಹಾವಳಿಯಿಂದ ಬೆಳೆಹಾನಿಯಾಗಿದೆ. ಅದಕ್ಕೆ ಶಾಶ್ವತವಾದ ಪರಿಹಾರವನ್ನು ಘೋಷಣೆ ಮಾಡುವುದಾಗಿ ಮಾಧ್ಯಮದ ಮೂಲಕ ಹೇಳಿದ್ದಾರೆ, ಸಭೆಯಲ್ಲಿಯೂ ಕೂಡ ಹೇಳಿದ್ದಾರೆ, ಆ ಕಾರಣಕ್ಕಾಗಿ ನಾನು ಇವತ್ತು ಅವರಲ್ಲಿ ಒತಾಯಿಸುತ್ತೇನೆ. ಆ ಪ್ರದೇಶದಲ್ಲಿ ಬರತಕ್ಕಂಥ ರೈತರಿಗೆ ಶಾಶ್ವತ ಪರಿಹಾರ ಸಿಗಬೇಕಾದರೆ ಆ ಪ್ರದೇಶವನ್ನು ಮುಳುಗಡೆ ಪ್ರದೇಶವೆಂದು ಘೋಷಣೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಅವರನ್ನು ಒತ್ತಾಯ ಮಾಡುತ್ತೇನೆ. ಅವರು ಈಗಾಗಲೇ ಘೋಷಣೆ ಮಾಡಿದ್ದಾರೆ, ಆದರೆ ಈ ಸದನದ ಮೂಲಕ ಇವತ್ತು ಆ ಬದ್ಧತೆಯನ್ನು ತೋರಿಸುತ್ತಾರೆಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ. ಹಾಗಾಗಿ ಇವತ್ತು ನೆರೆ ಪರಿಹಾರ ಕಾರ್ಯಕ್ರಮ ಸರಿಯಾಗಿ ಆಗುತ್ತಿಲ್ಲ.

ಶ್ರೀ ಅಮರೇಗೌಡ ಬಯ್ಯಾಪುರ(ಕುಷ್ಟಗಿ) : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕರಡಿ ಸಂಗಣ್ಣನವರು ಹೇಳಿದ ಹಾಗೆ ಮಾನ್ಯ ಸಚಿವರು ನನ್ನ ಕ್ಷೇತ್ರಕ್ಕೂ, ಕರಡಿ ಸಂಗಣ್ಣನವರ ಕ್ಷೇತ್ರಕ್ಕೂ ಬಂದು ಚೆಕ್ ಅನ್ನು ವಿತರಿಸಿದರು. ಚೆಕ್ ವಿತರಣೆ ಮಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನೂ ಕೂಡ ಅವರು ಹೇಳಿದ್ದಾರೆ. ಅವರು ಬಹಳ ಜವಾಬ್ದಾರಿಯುತ ಖಾತೆಯನ್ನು ಹೊಂದಿರುವಂಥವರು ಹಿರಿಯ ಸಚಿವರು ಸಹ ಆಗಿದ್ದು ಅವರ ಮಾತಿಗೆ ಬೆಲೆಯಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅವರು ಮಾತನಾಡುವ ಸಂದರ್ಭದಲ್ಲಿ ಮನೆ ಇರುವಂಥವರಿಗೆ ಯಾರಿಗೆ ನಾವು 7,000–00 ರೂಪಾಯಿಗಳನ್ನು ವಿತರಣೆ ಮಾಡಿದ್ದೇವೆ ಮತ್ತು 4,500 ರೂಪಾಯಿಗಳ ಚೆಕ್ ಅನ್ನು ಸಹ

ಕೊಟ್ಟಿದ್ದೇವೆ. 7,000–00 ರೂಪಾಯಿಗಳ ಚೆಕ್ ಅನ್ನು ಕೊಟ್ಟಿರುವಂಥ ಮನೆ ಮಾಲೀಕರಿಗೆ ಮುಂದಿನ ದಿನಮಾನಗಳಲ್ಲಿ 30,000–00 ರೂಪಾಯಿಗಳನ್ನು ಕೊಟ್ಟು ಅಥವಾ ಅವರಿಗೆ ಒಂದು ಪೂರ್ಣ ಮನೆಯನ್ನು ಕಟ್ಟಿಸಿಕೊಡುವಂಥ ಕೆಲಸವನ್ನು ಮಾಡುತ್ತೇವೆಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆಯನ್ನು ಸಚಿವರು ಕೊಟ್ಟಿದ್ದರು. ನಾವೆಲ್ಲಾ ಕೂಡ ಅವರ ಬಗ್ಗೆ ಬಹಳ ಗೌರವವನ್ನು ಇಟ್ಟುಕೊಂಡಿದ್ದೇವೆ. 7,000–00 ರೂಪಾಯಿಗಳನ್ನು ಕೊಟ್ಟಿರುವವರಿಗೆ ಒಂದು ಮನೆಯನ್ನಾಗಲಿ ಅಥವಾ 30,000–00 ರೂಪಾಯಿಗಳನ್ನು ಕೊಡುವಂಥ ಕೆಲಸವನ್ನಾಗಲಿ ಸರ್ಕಾರ ಮಾಡುತ್ತದೆಂಬ ವಿಶ್ವಾಸವನ್ನು ಇಟ್ಟುಕೊಂಡು ನಾವು ಸಹ ಹಳ್ಳಿಗಳಿಗೆ ಹೋಗಿ ಭಾಷಣವನ್ನು ಮಾಡಿದೆವು. 7,000–00 ರೂಪಾಯಿಗಳನ್ನು ಕೊಟ್ಟಂಥವರಿಗೆ ಸರ್ಕಾರ ಮುಂದೆ ಮುವತ್ತು ಸಾವಿರ ರೂಪಾಯಿಗಳನ್ನು ಕೊಡುತ್ತದೆ ಅಥವಾ ಒಂದು ಮನೆಯನ್ನಾದರೂ ಕಟ್ಟಿಸಿಕೊಡುತ್ತದೆ ಎನ್ನುವ ಮಾತನ್ನು ನಾವು ಸಹ ಹೇಳಿದೆವು. ನಂತರ ಸರ್ಕಾರ ಈಗ ತಿರುಚಿ ಇಲ್ಲ ಅಷ್ಟೇ ಕೊನೆ, ಏಕೆಂದರೆ ನಾವು ಅಧಿಕಾರಿಗಳನ್ನು, ಇಂಜಿನಿಯರ್‌ಗಳನ್ನು ನೇಮಿಸಿದ್ದೇವೆ ಹಾಗಾಗಿ ನಾವು ಈಗ ಕೊಡುವುದಕ್ಕಾಗುವುದಿಲ್ಲವೆಂಬ ಮಾತನ್ನು ಹೇಳಿ ಇವತ್ತು ಆ 7,000–00 ರೂಪಾಯಿಗಳಿಗೆ ಇತಿಶ್ರೀ ಹಾಡಿರುವುದು ನಮ್ಮ ಮುಂದಿರುವ ಸಂಗತಿ. ಆದ್ದರಿಂದ ಈ ರೀತಿ ಹೇಳಿದ್ದರಿಂದ ಹಳ್ಳಿಯಲ್ಲಿ ಜನ ನಮಗೆ ಕಲ್ಲನ್ನು ಎಸೆಯುವಂಥ ಕೆಲಸವನ್ನು ಮಾಡುತ್ತಿದ್ದಾರೆ. ದಯವಿಟ್ಟು ಸರ್ಕಾರ ಮತ್ತು ಸನ್ಮಾನ್ಯ ಸಚಿವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮುಂದಿನ ದಿನಮಾನಗಳಲ್ಲಾದರೂ ಕೂಡ ಕೊನೆಪಕ್ಷ ಯಾರಿಗೆ ನಾವು ಏಳು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ ಅವರಿಗೆ ಮುವತ್ತು ಸಾವಿರ ರೂಪಾಯಿ ಗಳನ್ನು ಕೊಡುವಂಥ ಕೆಲಸವನ್ನು ಮಾಡಬೇಕು, ಕೊನೆಗೆ ಆಶ್ರಯ ಯೋಜನೆಯಲ್ಲಿ ಅವರಿಗೆ ಒಂದು ಮನೆಯನ್ನು ಕೊಡಬೇಕು, ಇಲ್ಲವೇ ಇಂದಿರಾ ಆವಾಸ್ ಯೋಜನೆಯಲ್ಲಿ ಮನೆಯನ್ನಾದರೂ ಕೊಡಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು. ಏಕೆಂದರೆ ಕೊಪ್ಪಳ ಜಿಲ್ಲೆಯಲ್ಲಿ ಅತ್ಯಂತ ಗಂಭೀರವಾದಂಥ ಕೆಲಸ ಆಗಿದೆ, ಆದ್ದರಿಂದ ಈ ಕೆಲಸ ಆಗಬೇಕು. ಇದನ್ನು ಮಾನ್ಯ ಕಂದಾಯ ಸಚಿವರು ನೋಡಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ನಾಲ್ಕು ಬಾರಿ ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಿರುವಂಥ ಕೆಲಸ ಮಾಡಿದ್ದಾರೆ, ಇದರ ಬಗ್ಗೆ ಬಹಳ ಗಂಭಿರವಾಗಿ ವಿಚಾರ ಮಾಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ : ಅಮರೇಗೌಡರು ಹೇಳಿದ ಹಾಗೆ ಸಂಪೂರ್ಣವಾಗಿ ಬಿದ್ದಿರುವಂಥ ಮನೆಗಳ ಮಾಲೀಕರಿಗೆ ಚೆಕ್ ಅನ್ನು ಅಪೂರ್ಣಗೊಳಿಸಿದ್ದಾರೆ. ಪ್ರಥಮ ಹಂತದಲ್ಲಿ ಏಳು ಸಾವಿರ ರೂಪಾಯಿಗಳ ಚೆಕ್ ಅನ್ನು ಕೊಟ್ಟರು, ಆಮೇಲೆ ಉಳಿದ 30,000–00 ರೂಪಾಯಿಗಳ ಚೆಕ್ ಅನ್ನು ಕೊಡುತ್ತೇವೆಂದು ಹೇಳಿದರು. ಆ ಕೆಲಸ ಎಲ್ಲಿಯೂ ಕೂಡ ಸಂಪೂರ್ಣವಾಗಿ ಕಾರ್ಯಗತವಾಗಿಲ್ಲ. ಆ ಕಾರಣಕ್ಕಾಗಿ ಆ ಫಲಾನುಭವಿಗಳು ನೀವು ಸರ್ಕಾರದ ಮೇಲೆ ಒತ್ತಡ ಹಾಕುತ್ತಿಲ್ಲ. ನಮಗೆ ಜೀವನ ಮಾಡಬೇಕಾದರೆ ನಾವು ಮನೆಯನ್ನು restructure ಮಾಡಬೇಕಾಗಿದೆ. ಆ ಕಾರಣಕ್ಕಾಗಿ ಜನ ಕಂಗಾಲಾಗಿದ್ದಾರೆ. ಸಚಿವರು ತಾವು ಹೇಳಿದ ಹಾಗೆ ಇನ್ನು ಉಳಿದ ಮುವತ್ತು ಸಾವಿರ ರೂಪಾಯಿಗಳನ್ನು ಪರಿಹಾರ ಧನವಾಗಿ ಕೊಡದಿದ್ದರೆ ಜನ ದಂಗೆ ಏಳುವಂಥ ವಾತಾವರಣ ನಿರ್ಮಾಣವಾಗುತ್ತದೆ. ಆ ಕಾರಣಕ್ಕಾಗಿ ಪೂರ್ಣ ಪರಿಹಾರವನ್ನು ಕೊಡಬೇಕಾಗಿ ಒತ್ತಾಯಿಸುತ್ತೇನೆ. ಅಲ್ಲದೆ ಬಹಳಷ್ಟು ಉದ್ದಿಮೆದಾರರು ವಹಿಸಿಕೊಟ್ಟಿದ್ದಾರೆ. ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ನಮ್ಮ ಕಲ್ಯಾಣ ಫ್ಯಾಕ್ಟರಿಯವರಿಗೆ entrust ಮಾಡಿ MOU sign ಮಾಡಿದ್ದಾರೆ. ಆದರೆ ಎಲ್ಲಿಯೂ ಕೂಡ ಒಂದು ಮನೆಯೂ ಪ್ರಾರಂಭ ವಾಗಿಲ್ಲ, ನಮ್ಮದೇನು ಆತಂಕ ಎಂದರೆ ನೀವು ಮನೆ ಕಟ್ಟುತ್ತೇವೆಂದು ಹೇಳಿದಿರಿ, ನವಗ್ರಾಮ ನಿರ್ಮಾಣ ಮಾಡುತ್ತೇವೆಂದು ಹೇಳಿದಿರಿ, ಆ ಕೆಲಸ ಪ್ರಾರಂಭವಾಗದಿದ್ದರೆ ಮತ್ತೆ ಮಾನ್‌ಸೂನ್ ಪ್ರಾರಂಭವಾದರೆ ಅವರ ಬದುಕು ಹೇಗೆ ಎಂದು ಅರ್ಥ ಮಾಡಿಕೊಳ್ಳಬೇಕು. ಅಲ್ಲಿ ಕಟ್ಟತಕ್ಕಂಥ ಮನೆಗಳನ್ನು ನಮ್ಮ ಇಂಜಿನಿಯರ್ಸ್ ಬಂದು ಲೋಕಲ್ ಬ್ರಿಕ್ಸ್, ಮೆಟಿರಿಯಲ್ಸ್ ಅನ್ನು ಚೆಕ್ ಮಾಡಿದ್ದಾರೆ. ಗುಣಮಟ್ಟವಿಲ್ಲದಂಥ ಮನೆಗಳ ನಿರ್ಮಾಣವಾಗುತ್ತವೆಂಬ ಶಂಕೆ ಕೂಡ ನಮಗೆ ಬರುತ್ತಿವೆ. ನೀವು ಕಟ್ಟುವುದಾದರೆ ಪಕ್ಕಾ ಮನೆಗಳನ್ನು ಕಟ್ಟಿಕೊಡಿ, ಸರ್ಕಾರಕ್ಕೆ ಒಂದು ಒಳ್ಳೆಯ ಹೆಸರು ಇರುತ್ತದೆ. ಅವರ ಬದುಕು ಸುಭದ್ರವಾಗಿರಬೇಕಾದರೆ ಒಂದು ಪಕ್ಕಾ ಮನೆ ನಿರ್ಮಾಣವಾಗಬೇಕಾಗುತ್ತದೆ. ನೀವು ಯಾವುದೋ ಉದ್ದಿಮೆದಾರರಿಗೆ ಹೇಳಿದ್ದೇವೆ, ಅವರು ಹೇಗೆ ಮನೆಯನ್ನು ಕಟ್ಟಿಕೊಡುತ್ತಾರೆ ಅದನ್ನು ಸ್ವೀಕರಿಸಬೇಕೆಂದು ಹೇಳಿದರೆ ಅಲ್ಲಿ ಯಾವುದೇ ಕೆಲಸ ಕಾರ್ಯಗಳು ನಡೆಯುವುದಿಲ್ಲ. ಆ ಕಾರಣಕ್ಕಾಗಿ ಸರ್ಕಾರವೇ ಇವತ್ತು ಮುಂದು ಬರಬೇಕಾಗುತ್ತದೆ. ಅವರು ಎಷ್ಟು ಹಣವನ್ನು ಕೊಡುತ್ತಾರೋ ಅಷ್ಟನ್ನು ತೆಗೆದುಕೊಳ್ಳಿ, ಆದರೆ ಸರ್ಕಾರ ತಮ್ಮ ಪಾಲಿನ

ಉಳಿದ ಹಣವನ್ನು ಅದರಲ್ಲಿ ಹಾಕಿ ಸುಭದ್ರವಾದ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿ ನಾನು ಒತ್ತಾಯ ಮಾಡಿ ಈ ಪರಿಹಾರದ ಕಾರ್ಯಕ್ರಮ ಬಹಳ ಚುರುಕಿನಿಂದ ಆಗಬೇಕು. ಇವತ್ತು ಅರ್ಧಂಬರ್ಧ ಮಾಡಿ ಪರಿಹಾರ ತೆಗೆದುಕೊಂಡಿರುವವರಿಗೂ ತೃಪ್ತಿ ಇಲ್ಲ. ಉಳಿದ ಹಣ ಬರುತ್ತದೆಂಬ ಆಶಾಮನೋ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಇವತ್ತು ಮನೆಗೆ ನೀಡುವ ಚೆಕ್ ಇರಬಹುದು, ಪರಿಹಾರ ಧನ ಇರಬಹುದು. ನವಗಾಮ್ರಗಳನ್ನು ಶಿಫ್ಟ್ ಮಾಡುವುದಿರಬಹುದು, ರೈತರ ಪಂಪ್‌ಸೆಟ್ ಇರಬಹುದು.

ಶ್ರೀ ಪಿ.ಎಂ.ಅಶೋಕ : ಸದಸ್ಯರು ಮಾತನಾಡುವಾಗ ಮಂತ್ರಿಗಳು ಸ್ವಲ್ಪ ಗಮನ ಇಟ್ಟು ಕೇಳಬೇಕು. ಸುಮ್ಮನೆ ಮಾತನಾಡಿಕೊಂಡು ಕುಳಿತುಕೊಂಡರೆ ಆಗುವುದಿಲ್ಲ. ಹೀಗಾದರೆ ನಾವೇಕೆ ಮಾತನಾಡಬೇಕು. ಕಂದಾಯ ಸಚಿವರು ಸುಧಾಕರ್‌ರವರು ಮಾತನಾಡುತ್ತಾ ಕುಳಿತಿದ್ದಾರೆ, ನೀವು ಮಾತನಾಡಿ, ನಮಗೇನು ಬೇಜಾರಿಲ್ಲ, ಆದರೆ ಸಂಬಂಧಪಟ್ಟ ಇಲಾಖೆ ಬಗ್ಗೆ ಮಾತನಾಡುತ್ತಿರುವಾಗ ಈ ರೀತಿ ಆದರೆ ಹೇಗೆ?

ಅಧ್ಯಕ್ಷರು : ಆಯಿತು ನೀವು ಮಾತನಾಡಿ ಮುಗಿಸಿ.

ಶ್ರೀ ಕರಡಿ ಸಂಗಣ್ಣ : ಸರ್ಕಾರ ಈ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ ಈ ಒಂದು ನವಗ್ರಾಮ ನಿರ್ಮಾಣ, ಬೆಳೆಹಾನಿ ಪರಿಹಾರ, ಮನೆ ಪರಿಹಾರ ಕೊಡುವುದಿರಬಹುದು ಇದರ ಬಗ್ಗೆ ಸಮಗ್ರವಾದ ಚಿಂತನೆ ಮಾಡಿ ತೀವ್ರಗತಿಯಲ್ಲಿ ಚಾಲನೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ನಾಡಗೌಡರು ಮಾತನಾಡುವಿರಾ ಅಥವಾ ಮಧ್ಯಾಹ್ನ ಮಾತನಾಡುವಿರಾ?

ಶ್ರೀ ಅಪ್ಪಾಜಿ ಎಸ್.ನಾಡಗೌಡ : ಇವತ್ತು ಎಲೆಕ್ಷನ್ ಫಲಿತಾಂಶ ಇರುವುದರಿಂದ ಮಾಧ್ಯಮದವರು ಎಲ್ಲಾ ಲಾಬಿಯಲ್ಲಿದ್ದಾರೆ, ಮಧ್ಯಾಹ್ನ ಊಟವಾದ ನಂತರ ಮಾತನಾಡುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 2.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವನ್ನು ಮಧ್ಯಾಹ್ನ 1.20 ಗಂಟೆಗೆ ಮುಂದೂಡಿ ಪುನಃ ಬೋಜನದ ನಂತರ ಮಧ್ಯಾಹ್ನ 2.30 ಗಂಟೆಗೆ ಸೇರುವುದಾಗಿ ನಿರ್ಣಯಿಸಿತು)